ಸಂಪುಟ : 8 ಸಂಚಿಕೆ : 230 ಪುಟ : 4 ಬೆಲೆ : 3.00 ಮಂಗಳವಾರ ಅಕ್ಟೋಬರ್ 31, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 230 Pages : 4 Price : 3.00 Tuesday October 31, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ವಕಾರಸಾಲ ಪರಭಾರೆ ಮಾಡಲು ಸಂಚು ಆರೋಪ । ನಗರಸಭೆಯ ಸಾಮಾನ್ಯ ಸಭೆಯಲ್ಲಿ ಹಗ್ಗಜಗ್ಗಾಟ

# ವಕಾರಸಾಲ ವಿಷಯಕ್ಕೆ ರಣಾಂಗಣವಾದ ಸಾಮಾನ್ಯಸಭೆ







## ಪೊಲೀಸರು-ಪ್ರತಿಭಟನಾಕಾರರ ನಡುವೆ ವಾಗ್ವಾದ

ನಗರಸಭೆಯ ಸಭಾಭವನದಲ್ಲಿ ಸಾಮಾನ್ಯ ಸಭೆ ಆರಂಭವಾಗುತ್ತಿದ್ದಂತೆ, ನಗರಸಭೆ ಗೇಟ್ ಹತ್ತಿ ಸಭೆಯ ಆವರಣಕ್ಕೆ ನುಗ್ಗಲು ಯತ್ನಿಸಿದ ಪ್ರತಿಭಟನಾಕಾರರನ್ನು ತಡೆಯಲು ಪೊಲೀಸರು ಹರಸಹಾಸಪಡಬೇಕಾಯಿತು. ನಗರಸಭೆ, ಬಿಜೆಪಿ ಆಡಳಿತದ ವಿರುದ್ಧ ಪ್ರತಿಭಟನಾಕಾರರು ಕೆಂಡಾಮಂಡಲವಾಗಿದ್ದರು. ಈ ವೇಳೆ ಪ್ರತಿಭಟನಾಕಾರರು, ಪೊಲೀಸರ ನಡುವೆ ನೂಕಾಟ, ತಳ್ಳಾಟ, ವಾಗ್ವಾದಗಳೂ ನಡೆದವು. ಸ್ಥಳಕ್ಕೆ ಆಗಮಿಸಿದ ಆಯುಕ್ತರು, ಅಧಿಕಾರಿಗಳನ್ನು ಸಾರ್ವಜನಿಕರು, ಪ್ರತಿಭಟನಾಕಾರರು ತರಾಟೆಗೆ ತೆಗೆದು-ಕೊಂಡರು. ನಗರಸಭೆಯ ಅಮೂಲ್ಯ ಆಸ್ತಿಯನ್ನು ಶ್ರೀಮಂತರ ಪಾಲು ಮಾಡಲು ನಗರಸಭೆ ಆಡಳಿತ ಸಂಚು ರೂಪಿಸಿದೆ ಎಂದು ಆಕ್ರೋಶ ಹೊರಹಾಕಿದರು.





■ ವಿಜಯಸಾಕ್ಷಿ ಸುದ್ದಿ, ಗದಗ

ನಗರಸಭೆಯ ಸಭಾಭವನದಲ್ಲಿ ಸೋಮವಾರ ನಡೆದ ಸಾಮಾನ್ಯಸಭೆ ಸಾಮಾನ್ಯ ಸಭೆಯಾಗಿರದೇ ಹಲವು ವಿರೋಧ, ಸದಸ್ಯರ ನಡುವೆ ವಾಗ್ಯುದ್ಧ, ಅರಚಾಟ, ಪ್ರಗತಿಪರ ಸಂಘಟನೆಗಳ ಆಕ್ರೋಶ, ಪ್ರತಿಭಟನೆಗಳಿಗೂ ಸಾಕ್ಷಿಯಾಯಿತು.

ನಗರಸಭೆಯ ನೂರಾರು ಕೋಟಿ ರೂ. ಬೆಲೆಬಾಳುವ ಆಸ್ತಿಯನ್ನು ಲೀಸ್ ಆಧಾರದಲ್ಲಿ ಪರಭಾರೆ ಮಾಡುವ ಸಂಚನ್ನು ಬಿಜೆಪಿ ಆಡಳಿತದ ನಗರಸಭೆಯಿಂದ ನಡೆದಿದೆ ಎಂಬ ವಿಚಾರ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿತ್ತು. ನಗರದ ಹೃದಯ ಭಾಗದಲ್ಲಿರುವ ಗದಗ-ಬೆಟಗೇರಿ ನಗರಸಭೆಯ ಮಾಲೀಕತ್ವದ 54 ವಕಾರದ 34 ಎಕರೆ 32 ಗುಂಟೆ ಅತ್ಯಮೂಲ್ಯ ಜಮೀನು ನೂರಕ್ಕೂ ಹೆಚ್ಚು ವರ್ಷಗಳ ಕಾಲ ಲೀಸ್‌ನಲ್ಲಿತ್ತು. ಈ ಆಸ್ತಿಯನ್ನು ಗುಪ್ತವಾಗಿ 50-50 ಮಾಡಿ ಮಾರಾಟ ಮಾಡಲು ಅಥವಾ ನೇರ ಮಾರಾಟ ಮಾಡಲು ನಡೆಸಿದ ಹುನ್ನಾರವನ್ನು ಅರಿತ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ನಗರಸಭೆ 13-7-2019ರಂದು 2 ದಿನಗಳ ಕಾಲ ನಿರಂತರವಾಗಿ 54 ವಕಾರಸಾಲ ಮಳಿಗೆಗಳನ್ನು ನೆಲಸಮಗೊಳಿಸಿ ನಗರಸಭೆ ಕಬ್ಜಾಕ್ಕೆ ತೆಗೆದುಕೊಂಡಿತ್ತು.

ವಕಾರಸಾಲ ಜಾಗವನ್ನು ಖಾಸಗಿಯವರಿಗೆ ಪರಭಾರೆ ಮಾಡಬಾರದು ಎಂದು ಆಗ್ರಹಿಸಿದ ವಕಾರಸಾಲ ಅಭಿವೃದ್ಧಿ ಹೋರಾಟ ಸಮಿತಿಯ ಸದಸ್ಯರು, ಈ ವಕಾರಸಾಲನ್ನು ಈ ಹಿಂದೆ ಲೀಸ್‌ನಲ್ಲಿದ್ದ ಮಾಲೀಕರಿಗೆ, ಖಾಸಗಿಯವರಿಗೆ ಅಥವಾ ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ ಮತ್ತೆ ಲೀಸ್‌ಗೆ ಕೊಡುವ ಒಳಸಂಚು ನಡೆದಿದೆ ಎಂಬ ಆತಂಕ ವ್ಯಕ್ತಪಡಿಸಿ, ನೂರಾರು ಕೋಟಿ ರೂ ಬೆಲೆಬಾಳುವ ನಗರಸಭೆ ಆಸ್ತಿ ಪುನಃ ಯಾರದೋ ಪಾಲು ಮಾಡಲು ಗದಗ-ಬೆಟಗೇರಿ ನಗರಸಭೆ ಸಂಚು ರೂಪಿಸಿದೆ ಎಂದು ಆರೋಪಿಸಿದರು.

ಈ ಹಿನ್ನೆಲೆಯಲ್ಲಿ, ಸೋಮವಾರ ನಡೆಯುವ ಸಾಮಾನ್ಯ ಸಭೆಯಲ್ಲಿ ಠರಾವು ಮಾಡಿದ್ದೇ ಹೌದಾದರೆ, ಕಪ್ಪು ಮಸಿ ಬಳಿಯುವ ಎಚ್ಚರಿಕೆಯನ್ನೂ ನೀಡಿದರು. ನಗರಸಭೆ ಕಚೇರಿಯೆದುರು ಜಮಾಯಿಸಿದ ನೂರಾರು ಸಂಖ್ಯೆಯ ಸದಸ್ಯರು, ರಸ್ತೆಯಲ್ಲಿ ಆಟೋಗಳನ್ನು ನಿಲ್ಲಿಸಿ, ನಗರಸಭೆಯ ಬಿಜೆಪಿ ಆಡಳಿತದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ನಗರಸಭೆಯ ವಕಾರ ಸಾಲಿನ ಜಾಗದಲ್ಲಿ ಬೃಹತ್ ಮಾಲ್‌ಗಳನ್ನು ನಿರ್ಮಾಣ ಮಾಡಿ, ವಾಣಿಜ್ಯ ಸಂಕೀರ್ಣ ಸೇರಿದಂತೆ ಸಾರ್ವಜನಿಕ ಬಳಕೆಯ, ಅವಳಿ ನಗರದ ಅಂದ ಹೆಚ್ಚಿಸುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಸಬೇಕು, ಈ ಜಾಗದ ಎರಡನೇ ಅಥವಾ ಮೂರನೇ ಮಹಡಿಯಲ್ಲಿ ಬಡವರಿಗೆ, ಪೌರಕಾರ್ಮಿಕರಿಗೆ ಮನೆ ನಿರ್ಮಾಣ ಮಾಡಬೇಕು ಇತ್ಯಾದಿ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿದರು.

ಪ್ರತಿಭಟನೆಯ ಹಿನ್ನೆಲೆಯಲ್ಲಿ ನಗರಸಭೆ ಕಚೇರಿಗೆ ಬಿಗಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಈ ನಡುವೆ, ಕಡ್ಡಾಯವಾಗಿ ಸಭೆಗೆ ಹಾಜರಾಗುವಂತೆ ನಗರಸಭೆಯಿಂದ ಕಾಂಗ್ರೆಸ್ ಸದಸ್ಯರಿಗೆ ನೋಟಿಸ್ ಹೊರಡಿಸಲಾಗಿತ್ತು. ಅಲ್ಲದೆ, ಸಭೆಯಲ್ಲಿ ವಕಾರಸಾಲ ಆಸ್ತಿ ▶▶ 3ನೇ ಪುಟಕ್ಕೆ

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 31 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ:** ವಾರ್ಡ್ ನಂ. 30, 34, 35 ಆದರ್ಶ ನಗರ, ಹುಡ್ಕೋ, ಡಿಪೋ ಕೆಳಗಿನ ಭಾಗ, ಕುಮಾರೇಶ್ವರ ಪಾಠಶಾಲೆ, ಶರಣಬಸವೇಶ್ವರ ಶಾಲೆ ಮೇಲಿನ ಭಾಗ, ಮಸೀದಿ ಲೈನ್, ಹೂಗಾರ ಪ್ಲಾಟ್, ಗಣಪತಿ ಗುಡಿ ಹಿಂದೆ-ಮುಂದೆ, ಹುಡ್ಕೋ ಟ್ಯಾಂಕಿನ ಸುತ್ತಮುತ್ತಲಿನ ಭಾಗಗಳು, 2ನೇ ಕ್ರಾಸ್, ಹನುಮಂತ ದೇವರ ಗುಡಿ ಹತ್ತಿರದ ಭಾಗಗಳು

ವಾರ್ಡ್ ನಂ. 29 ಬನ್ನಿಕಟ್ಟಿ ಲೈನ್, ಪರಸುರವರ ಲೈನ್, ಹೊಸ ಹುಡ್ಕೋ ಭಾಗ, ವಾರ್ಡ್ ನಂ. 22 ಗಂಗಿಮಡಿ ಕನ್ನಡ ಶಾಲೆ, ಶುದ್ಧ ನೀರಿನ ಘಟಕ, ಭಾಗ 4. ವಾರ್ಡ್ ನಂ. 16, 21 ಕುಷ್ಠರೋಗ ಕಾಲೋನಿ, ಕುಂಬಾರ ಓಣಿ, ರಹಮತ್ ನಗರ, ಗುಡದೂರ ಸ್ವಾಮಿ, ಅಂಬೇಡ್ಕರ್ ಓಣಿ, ಶೇಖಪ್ಪನ ಓಣಿ, ವಾರ್ಡ್ ನಂ 2 ಸೆಟ್ಲಮೆಂಟ್ ಸ್ಲಾಬ್ ಮನೆ, ಗಾಂಧಿನಗರ ಸಬ್ ಜೈಲ್ ರೋಡ್, ಹರಣಶಿಕಾರಿ ಓಣಿ, ಮಾನ್ವಿ ಚಾಳ ಕುಷ್ಟಗಿ ಚಾಳ ವೆಲ್ಲೇರ್. ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ಸಂಭ್ರಮ-50: ಮಾರಾಟ ಮಳಿಗೆಗಳಿಗೆ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ನಾಮಕರಣವಾಗಿ 50 ವರ್ಷ ಪೂರ್ಣಗೊಂಡಿರುವ ಹಿನ್ನೆಲೆಯಲ್ಲಿ ಗದಗ ನಗರದ ದಿ.ಕಾಟನ್ ಸೇಲ್ ಸೊಸೈಟಿ ಆವರಣದಲ್ಲಿ ನವೆಂಬರ್ 1ರಿಂದ 3ರವರೆಗೆ ಮೂರು ದಿನಗಳ ಕಾಲ ಬೃಹತ್ ಸಮಾವೇಶ ಜರುಗಲಿದೆ.

ಸದರಿ ಕಾರ್ಯಕ್ರಮದಲ್ಲಿ ಲಕ್ಷಾಂತರ ಜನರು ಭಾಗಿಯಾಗುವ ನಿರೀಕ್ಷೆ ಹೊಂದಲಾಗಿದೆ. ಕಾರ್ಯಕ್ರಮ ಜರುಗುವ ಸ್ಥಳದಲ್ಲಿ 10*10 ಅಳತೆಯ 10 ಮಾರಾಟ ಮಳಿಗೆಗಳನ್ನು ತೆರೆಯಲಾಗಿದ್ದು, ಪ್ರತಿ ಮಳಿಗೆಗೆ 2000 ರೂ.ಗಳ ಬಾಡಿಗೆಯನ್ನು ಪ್ರತಿ ದಿನಕ್ಕೆ ನಿಗದಿಪಡಿಸಿ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಸದರಿ ಮಳಿಗೆಯಲ್ಲಿ ತಿಂಡಿ-ತಿನಿಸು, ಪುಸ್ತಕ ಮುಂತಾದ ಮಳಿಗೆಗಳನ್ನು ತೆರಯಲು ಬಾಡಿಗೆ ಆಧಾರದ ಮೇಲೆ ನೀಡಲಾಗುವದು. ಆಸಕ್ತರು ಕೃಷಿ ಇಲಾಖೆಯ ಉಪನಿರ್ದೇಶಕರಾದ ನಾಗನಗೌಡ ರೆಡ್ಡಿ-8277931402, ಸಿದ್ದೇಶ ಕೋಡಿಹಳ್ಳಿ-8277931447 ಇವರನ್ನು ಸಂಪರ್ಕಿಸಬಹುದಾಗಿದೆ. ಮೊದಲು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವದು ಎಂದು ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ದರಪಟ್ಟಿ ಆಹಾನ

■ ವಿಜಯಸಾಕ್ಷಿ ಸುದ್ದಿ, ಗದಗ

ಸಾರ್ವಜನಿಕ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ 2022-23ನೇ ಸಾಲಿಗೆ ಪಿ.ಎ.ಬಿ. ಅನುಮೋದಿತ ವಿಶೇಷ ಅಗತ್ಯವುಳ್ಳ ವಿದ್ಯಾರ್ಥಿಗಳ ಮತ್ತು ಕಲಿಕಾ ಚಟುವಟಿಕೆಗಳ ಅಯೋಜನೆಗೆ ಜಿಲ್ಲೆಯ ಗದಗ ಶಹರ ಮತ್ತು ನರಗುಂದ ವಲಯಕ್ಕೆ ಸಾಧನ ಸಲಕರಣೆ ಮತ್ತು ಕಲಿಕಾ ಉಪಕರಣಗಳನ್ನು ಖರೀದಿಸಲು ದರಪಟ್ಟಿ ಆಹ್ವಾನಿಸಲಾಗಿದೆ. ದರಪಟ್ಟಿಯನ್ನು ನವೆಂಬರ್ 4 ರೊಳಗೆ ಕಚೇರಿ ಅವಧಿಯಲ್ಲಿ ಸಲ್ಲಿಸಬಹುದಾಗಿದೆ. ಸಂಬಂಧಿಸಿದ ಉಪಕರಣಗಳನ್ನು ಸರಬರಾಜು ಮಾಡಲು ಬಯಸುವ ಅರ್ಹ ಏಜೆನ್ಸಿ / ಸಂಸ್ಥೆಯವರು ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಖೆ, ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮ, ಗದಗ ಕಚೇರಿಗೆ ಮತ್ತು ದೂರವಾಣಿ ಸಂಖ್ಯೆ 08372-239410 ಸಂಪರ್ಕಿಸಬಹುದಾಗಿದೆ.

### ಮೀಸಲಾತಿಗಾಗಿ ಹೆದ್ದಾರಿಯಲ್ಲಿ ಇಷ್ಟಲಿಂಗಪೂಜೆಗೈದ ಜಯಮೃತ್ಯುಂಜಯ ಸ್ವಾಮೀಜಿ

# 2ಎ ಮೀಸಲಾತಿ ಸಿಗುವವರೆಗೂ ಹೋರಾಟ ನಿಲ್ಲದು



■ ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಯಾವುದೇ ಸರಕಾರ ಅಧಿಕಾರದಲ್ಲಿದ್ದರೂ, ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಸಿಗುವವರೆಗೂ ನನ್ನ ಹೋರಾಟ ಮುಂದುವರಿಯುತ್ತದೆ. ನಾನು ಪಂಚಮಸಾಲಿ ಪೀಠಕ್ಕೆ ಬಂದಿದ್ದೇ ನಮ್ಮ ಸಮಾಜಕ್ಕೆ ಆಗುತ್ತಿರುವ ತೊಂದರೆ, ಮಕ್ಕಳಿಗೆ ಮೀಸಲಾತಿಯ ಅನುಕೂಲತೆ ಕಲ್ಪಿಸಿಕೊಡಲು. ಅಂಬೇಡ್ಕರ ಅವರು ನೀಡಿದ ಸಂವಿಧಾನಬದ್ಧ ಹಕ್ಕಾಗಿರುವ ಮೀಸಲಾತಿಯನ್ನು ಪಡೆಯಲು ನಾವು ಹೋರಾಟ ಕೈಗೊಂಡಿದ್ದೇವೆ ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ನುಡಿದರು.

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಹಾಗೂ ಲಿಂಗಾಯತರನ್ನು ಕೇಂದ್ರ ಸರ್ಕಾರದ ಓಬಿಸಿ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಸೋಮವಾರ ತಾಲೂಕಿನ ಅಸುಂಡಿ ಕ್ರಾಸ್ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಮಾಜ ಬಾಂಧವರೊಡಗೂಡಿ ಇಷ್ಟಲಿಂಗ ಪೂಜೆ ನೆರವೇರಿಸುವ ಮೂಲಕ ಪ್ರತಿಭಟನೆ ನಡೆಸಿ ಅವರು ಮಾತನಾಡಿದರು.

ಮೀಸಲಾತಿಗಾಗಿ ಈ ಹಿಂದೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿ ಮಾಡಿ ವಿಷಯ ತಿಳಿಸಲಾಗಿತ್ತು. ಅವರು ಒಂದು ತಿಂಗಳಲ್ಲಿ ಅಧಿಕಾರಿಗಳೊಂದಿಗೆ ಚರ್ಚಿಸಿ ಸಭೆಗೆ ಆಹ್ವಾನಿಸುವ ಭರವಸೆ ನೀಡಿದ್ದರು. ಆದರೆ ಈವರೆಗೂ ಸ್ಪಂದನೆ ಸಿಕ್ಕಿಲ್ಲ. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದು ಶ್ರೀಗಳು ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಶ್ರೀಗಳಿಗಾಗಿ ಇಷ್ಟಲಿಂಗ ಪೂಜೆಗೆ ಪ್ರತ್ಯೇಕ ವೇದಿಕೆ ನಿರ್ಮಿಸಲಾಗಿತ್ತು. ಇದಕ್ಕೆ ಶ್ರೀಗಳು ಅಸಮಾಧಾನ ವ್ಯಕ್ತಪಡಿಸಿ, ತಾವೂ ಸಹ ರಸ್ತೆಯಲ್ಲೇ ಕುಳಿತು ಪೂಜೆ ನೆರವೇರಿಸುವುದಾಗಿ ತಿಳಿಸಿದರು. ▶▶ 3ನೇ ಪುಟಕ್ಕೆ

## ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿನ ಜಿಲ್ಲಾ ಂುೋಜನೆಂುಡಿ ಕುಶಲಕರ್ಮಿಗಳಿಗೆ ಉಚಿತವಾಗಿ ಹೊಲಿಗೆಯಂತ್ರ ( ಮಹಿಳೆಯರಿಗೆ ಮಾತ್ರ) ಬಡಿಗತನ, ಧೋಬಿ ಹಾಗೂ ಕ್ಷೌರಿಕ ಸುಧಾರಿತ ಉಪಕರಣಗಳಿಗಾಗಿ ಕಾರ್ಯಕ್ರಮದಡಿ ಪೂರೈಸಲು gadag.nic.in ವೆಬ್‌ಸೈಟ್ ನಲ್ಲಿ ನವೆಂಬರ್ 20 ರವರೆಗೆ ಆನ್‌ಲೈಲ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಗ್ರಾಮ ಪಂಚಾಯತ್ ವ್ಯಾಪ್ತಿಗೆ ಒಳಪಡುವ 18 ರಿಂದ 45 ವರ್ಷದೊಳಗಿನ ಕುಶಲಕರ್ಮಿಗಳು ಅರ್ಜಿ ಸಲ್ಲಿಸಬಹುದಾಗಿದೆ.

ಆನ್‌ಲೈನ್ ನಲ್ಲಿ ಸಲ್ಲಿಸಿದ 1 ಪ್ರತಿ ಅರ್ಜಿ ನಮೂನೆ ಹಾಗೂ ದಾಖಲೆಗಳನ್ನು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಕಚೇರಿಗೆ ಅಂಚೆ ಅಥವಾ ಖುದ್ದಾಗಿ ಬಂದು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರು ( ಗ್ರಾ.ಕೈ) ಗ್ರಾಮೀಣ ಮತ್ತು ಸಣ್ಣ ಉದ್ಯಮ ವಿಭಾಗ, ಜಿಲ್ಲಾ ಪಂಚಾಯತ್ , ಗದಗ ದೂರವಾಣಿ ಸಂಖ್ಯೆ 08372-220506 ಅನ್ನು ಸಂಪರ್ಕಿಸಬಹುದಾಗಿದೆ.

## ಅಲ್ಪಸಂಖ್ಯಾತರ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

■ ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಇವರಿಂದ ಅಲ್ಪಸಂಖ್ಯಾತರ ಕಾನೂನು ಪದವೀಧರರಿಗೆ ತರಬೇತಿಗೆ ಆಯ್ಕೆ ಮಾಡಬೇಕಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ, ಪರ್ಶಿಯನ್) ಕಾನೂನು ಪದವೀಧರರಿಂದ ಭರ್ತಿ ಮಾಡಿದ ಅರ್ಜಿಗಳನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಗದಗ ಜಿಲ್ಲಾ ಕಚೇರಿಗೆ ▶▶ 3ನೇ ಪುಟಕ್ಕೆ

## ಕನ್ನಡ ಜಾತ್ರೆಯ ಪೂರ್ವಸಿದ್ಧತೆ ಪರಿಶೀಲಿಸಿದ ಸಚಿವ ಪಾಟೀಲ



■ ವಿಜಯಸಾಕ್ಷಿ ಸುದ್ದಿ, ಗದಗ

ನವೆಂಬರ್ 1 ರಿಂದ 3 ರ ವರೆಗೆ ನಗರದಲ್ಲಿ ಜರುಗಲಿರುವ ಕರ್ನಾಟಕ ಸಂಭ್ರಮ-50 ಕನ್ನಡ ಜಾತ್ರೆಯ ಪೂರ್ವ ಸಿದ್ಧತೆಗಳ ಕುರಿತು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಸೋಮವಾರದಂದು ನಗರದ ಕಾಟನ್ ಸೇಲ್ ಸೊಸೈಟಿಯಲ್ಲಿ ವೇದಿಕೆ ನಿರ್ಮಾಣ, ವೀರ ನಾರಾಯಣ ದೇವಸ್ಥಾನದಿಂದ ಹೊರಡಲಿರುವ ಮೆರವಣಿಗೆಯ ಮಾರ್ಗವನ್ನು ವೀಕ್ಷಿಸಿದರು.

ಈ ▶▶ 3ನೇ ಪುಟಕ್ಕೆ

## ನಾಳೆ ಕನ್ನಡ ರಾಜ್ಯೋತ್ಸವ

■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತದಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನವೆಂಬರ್ 1 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಸಾರ್ವಜನಿಕ ಧ್ವಜಾರೋಹಣ ಕಾರ್ಯಕ್ರಮವು ಜರುಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸಲಿದ್ದಾರೆ.

ರಾಜ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಸರ್ಕಾರಿ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್ , ಸಂಸದರುಗಳಾದ ಶಿವಕುಮಾರ ಉದಾಸಿ, ಪಿ.ಸಿ.ಗದ್ದಿಗೌಡರ, ವಿಧಾನಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಪ್ರದೀಪ ಶೆಟ್ಟರ್, ನರಗುಂದ ಶಾಸಕರಾದ ಸಿ.ಸಿ.ಪಾಟೀಲ, ರೋಣ ಶಾಸಕ ಜಿ.ಎಸ್.ಪಾಟೀಲ, ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ, ಗದಗ ಬೆಟಗೇರಿ ನಗರಸಭೆ ಅಧ್ಯಕ್ಷೆ ಉಷಾ ದಾಸರ, ನಗರಸಭೆ ಉಪಾಧ್ಯಕ್ಷೆ ಸುನಂದಾ ಬಾಕಳೆ ಆಗಮಿಸುವರು.

ವಾಣಿಜ್ಯ ತೆರಿಗೆ ಆಯುಕ್ತರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಿ.ಶಿಖಾ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ ವಿಶೇಷ ಆಹ್ವಾನಿತರಾಗಿ ಆಗಮಿಸುವರು.

**2023ನೇ ಸಾಲಿನ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಗಳು:**

ನವೆಂಬರ್ 1 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಕೆ.ಎಚ್.ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರಿಂದ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ. ನಂತರ ರಾಷ್ಟ್ರಗೀತೆ, ನಾಡಗೀತೆ, ಪರೇಡ್ ವೀಕ್ಷಣೆ, ಪಥ ಸಂಚಲನ ಮತ್ತು ವಂದನೆ ಸ್ವೀಕಾರ, ರಾಜ್ಯೋತ್ಸವದ ಸಂದೇಶ, 5 ಕನ್ನಡ ಗೀತೆಗಳು, ( ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು, ಎಲ್ಲಾದರೂ ಇರು ಎಂತಾದರು ಇರು, ಒಂದೇ ಒಂದೇ ಕರ್ನಾಟಕ ಒಂದೇ, ಹೊತ್ತಿತೋ ಹೊತ್ತಿತು ಕನ್ನಡದ ದೀಪ, ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ) ಸಾಂಸ್ಕೃತಿಕ ಕಾರ್ಯಕ್ರಮಗಳು, ಸಾಧಕರಿಗೆ ಸನ್ಮಾನ ಕಾರ್ಯಕ್ರಮಗಳು ಜರುಗಲಿವೆ.

### ಸಾಕ್ಷಿ ಸುಭಾಷಿತ

ಪಾಂಡಿತ್ಯ ಮತ್ತು ಅರಸುತನಗಳು ಯಾವಾಗಲೂ ಸಮಾನಾದುದಲ್ಲ

–ಸುಭಾಷಿತ

## ಸಂಪಾದಕೀಯ

# ಸಂಪುಟ ವಿಸ್ತರಣೆ ಗುಮ್ಮ- ನಿಗಮ ಮಂಡಳಿ ನೇಮಕ ವಿಳಂಬ

ಗ್ಯಾರಂಟಿ ಘೋಷಣೆಗಳ ಮೂಲಕ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರಕಾರಕ್ಕೆ ಆಂತರಿಕ ಬೇಗುದಿ ನಿಯಂತ್ರಿಸಲು ಈವರೆಗೂ ಸಾಧ್ಯವಾಗುತ್ತಿಲ್ಲ. ಸರಕಾರ ಅಧಿಕಾರಕ್ಕೆ ಬಂದ ದಿನದಿಂದಲೇ ಒಂದಲ್ಲ ಒಂದು ರೀತಿಯ ಅಸಮಾಧಾನ ಟಿಸಿಲೊಡೆಯುತ್ತಿದೆ. ಸ್ವ ಪಕ್ಷದವರ ರಾಜಕೀಯ ಹೇಳಿಕೆ ಮತ್ತು ಬೆಳವಣಿಗೆ ಬಗ್ಗೆ ಮೌನವಾಗಿಯೇ ಇದ್ದ ಸಿದ್ದರಾಮಯ್ಯ ಈಗ ಹೈಕಮಾಂಡ್ ಅಂಗಳಕ್ಕೆ ಚೆಂಡು ಒಗೆಯುವ ಮೂಲಕ ಮೌನ ಮುರಿದಿದ್ದಾರೆ.

ಮುಖ್ಯವಾಗಿ ಎರಡೂವರೆ ವರ್ಷದ ನಂತರ ಸಂಪುಟ ಪುನರ್ ರಚನೆಯಾಗಲಿದೆ ಎಂದು ಕೆ.ಎಚ್. ಮುನಿಯಪ್ಪ ನೀಡಿದ ಹೇಳಿಕೆ ಪಕ್ಷದಲ್ಲಿ ಸಾಕಷ್ಟು ಚರ್ಚೆಗೆ ಅವಕಾಶ ಕಲ್ಪಿಸಿಕೊಟ್ಟಿದೆ. ಮೊದಲೇ ಅನುದಾನವಿಲ್ಲದೇ ಶಾಸಕರು ಒಳಗೊಳಗೆ ಅಸಮಾಧಾನಗೊಂಡಿರುವ ಸಂದರ್ಭದಲ್ಲಿ ಎರಡೂವರೆ ವರ್ಷದ ನಂತರ ಸಂಪುಟ ಪುನರ್ ರಚನೆ ಎನ್ನುವ ಚರ್ಚೆ ಹೊಸ ನಿರೀಕ್ಷೆಗಳನ್ನು ಮೂಡಿಸಿದೆ.

ಸಚಿವ ಸ್ಥಾನದ ಆಕಾಂಕ್ಷಿಗಳಾಗಿರುವ ಶಾಸಕರು ಮಂತ್ರಿಗಿರಿ ಪಡೆದ ಮೇಲಾದರೂ ಅಭಿವೃದ್ಧಿಗೆ ಹಣ ಕಾಣಬಹುದು ಎನ್ನುವ ನಿರೀಕ್ಷೆಯಲ್ಲಿ ಒಂದಷ್ಟು ಹೇಳಿಕೆಗಳನ್ನು ನೀಡುತ್ತಿರುವುದು ಸರಕಾರವನ್ನು ಆಗಾಗ ಇಕ್ಕಟ್ಟಿಗೆ ಸಿಲುಕಿಸುತ್ತಲೆ ಇದೆ. ಒಂದೆಡೆ ಸರಕಾರ ಗ್ಯಾರಂಟಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಹೆಣಗಾಡುತ್ತಿದ್ದರೆ ಮತ್ತೊಂದೆಡೆ ಸ್ವಪಕ್ಷದ ಶಾಸಕರ ಮಂತ್ರಿಗಿರಿಗಾಗಿ ಮತ್ತು ಪ್ರತಿಷ್ಠೆ ಉಳಿಸಿಕೊಳ್ಳಲು ನೀಡುತ್ತಿರುವ ಹೇಳಿಕೆಗಳು ಸಿದ್ದರಾಮಯ್ಯ ಅವರಿಗೂ ಕಸಿವಿಸಿ ಮೂಡಿಸಿದೆ.

ಅದರಲ್ಲೂ ಬೆಳಗಾವಿ ವಿಷಯವಾಗಿ ಸತೀಶ ಜಾರಕಿಹೊಳಿ ಮತ್ತು ಡಿ.ಕೆ. ಶಿವಕುಮಾರ ನಡುವಿನ ಮುಸುಕಿನ ಗುದ್ದಾಟ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಮನೆಯಲ್ಲಿ ನಡೆಯುತ್ತಿರುವ ರಾಜಕೀಯ ಚರ್ಚೆಗಳು ಭಾರೀ ಚರ್ಚೆಗೆ ಕಾರಣವಾಗುತ್ತಿದೆ.

ಮಂತ್ರಿಗಿರಿ ಕನಸು ಕಾಣುತ್ತಿರುವ ಆಕಾಂಕ್ಷಿಗಳಿದಾಗಿ ನಿಗಮ ಮಂಡಳಿಗಳಿಗೆ ನೇಮಕವಾಗುತ್ತಿಲ್ಲ. ಸಚಿವ ಸ್ಥಾನದ ಆಕಾಂಕ್ಷಿಗಳಿಗೆ ನಿಗಮ ಮಂಡಳಿ ನೀಡಿ ಸಮಾಧಾನ ಮಾಡಲಾಗುತ್ತದೆ ಎನ್ನುವ ಊಹಾಪೋಹ ನಂಬಿರುವ ಹಿರಿಯ ಶಾಸಕರು, ಈಗ ನಿಗಮ ಮಂಡಳಿ ಬೇಡ ಎನ್ನುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

ಸಂಪುಟ ಪುನರ್ ರಚನೆ ವಿಷಯ ನಿಗಮ ಮಂಡಳಿಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ. ಇದರಿಂದ ಪಕ್ಷಕ್ಕಾಗಿ ದಶಕಗಳಿಂದ ದುಡಿದ ಕಾರ್ಯಕರ್ತರು ಸಹ ಯಾವುದೇ ಅವಕಾಶ ಸಿಗದೆ ಶಾಸಕರು, ಮಂತ್ರಿಗಳ ನಡುವಿನ ಮುಸುಕಿನ ಗುದ್ದಾಟ ನೋಡುವಂತಾಗಿದೆ. ಅಧಿಕಾರಕ್ಕಾಗಿ ಹಾತೊರೆದ ಕಾಂಗ್ರೆಸ್ ಈಗ ಅದೇ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೂ ಸಾಕಷ್ಟು ಕಸರತ್ತು ನಡೆಸಬೇಕಾಗಿರುವುದು ರಾಜಕೀಯದ ವೈಶಿಷ್ಟ್ಯ.

### ಭಾರತ ಒಕ್ಕೂಟ ಸ್ಥಾಪನೆಯ ಮೂಲಕ 'ಸರ್ದಾರ'ರಾದದ ವಲ್ಲಭ ಭಾಯಿ ಪಟೇಲ್

# ರಾಷ್ಟ್ರೀಯ ಏಕತೆಯ ಹರಿಕಾರ



'ಭಾರತದ ಉಕ್ಕಿನ ಮನುಷ್ಯ' ಸರ್ದಾರ್ ವಲ್ಲಭ ಭಾಯಿ ಪಟೇಲ್, ಹರಿದು ಹಂಚಿಹೋಗಿದ್ದ ಭಾರತದ ಸಂಸ್ಥಾನಗಳನ್ನು ಭಾರತ ಒಕ್ಕೂಟದಲ್ಲಿ ಸೇರಿಸಿ ಒಗ್ಗೂಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದರು. ಆದರೆ ಅದು ಸುಲಭದ ತುತ್ತಾಗಿರಲಿಲ್ಲ. ಸಂಸ್ಥಾನಗಳ ರಾಜ-ಮಹಾರಾಜರೊಂದಿಗೆ ಮಾತುಕತೆ ನಡೆಸುವ ಹೊಣೆಗಾರಿಕೆಯನ್ನು ಪ್ರಧಾನಿ ಜವಾಹರಲಾಲ್ ನೆಹರು ಅವರು ಪಟೇಲ್ ಹಾಗೂ ಭಾರತದ ಕೊನೆಯ ವೈಸ್‌ರಾಯ್ ಮೌಂಟ್ ಬ್ಯಾಟನ್ ರಾಜಕೀಯ ಸಲಹೆಗಾರ ಎ.ಪಿ ಮೆನನ್‌ರಿಗೆ ಹೊರಿಸಿದರು.

ಆಡಳಿತದಲ್ಲಿ ಅಖಿಲ ಭಾರತ ಸೇವೆಯನ್ನು (ಐಎಎಸ್, ಐಪಿಎಸ್, ಐಎಫ್ ಎಸ್) ಸೃಜಿಸುವಲ್ಲಿ ಪಟೇಲರ ಪಾತ್ರ ಪ್ರಮುಖವಾದುದು. ದೇಶದ ಉದ್ದಗಲದ ಮಹಾರಾಜರನ್ನು ಭಾರತದ ಒಕ್ಕೂಟದೊಂದಿಗೆ ತಮ್ಮ ಸಂಸ್ಥಾನಗಳನ್ನು ವಿಲೀನಗೊಳಿಸುವಂತೆ ಅವರ ಮನವೊಲಿಸಿದರು. ಭಿನ್ನಾಭಿಪ್ರಾಯದ ಪ್ರಾಂತೀಯ ಮನಸ್ಸುಗಳು ವಿಲೀನಗೊಂಡು, ಒಗ್ಗೂಡಿ ಭಾರತ ಒಕ್ಕೂಟ ಸ್ಥಾಪನೆಯಾಗುವಂತಾಗಿದ್ದಕ್ಕೆ ಪಟೇಲರ ದಣಿವರಿಯದ ಪ್ರಯತ್ನವೇ ಕಾರಣ.

ವಲ್ಲಭಭಾಯಿ ಪಟೇಲರು ಸರ್ದಾರರಾಗಿದ್ದಕ್ಕೂ ಒಂದು ಐತಿಹ್ಯವಿದೆ. ಸರ್ದಾರ ಎಂದರೆ ನಾಯಕ, ಯುದ್ಧದ ದಳಪತಿ, ಕಮಾಂಡರ್ ಎಂದೆಲ್ಲ ಅರ್ಥ. ರೈತರಿಗೆ ಹೆಚ್ಚಿನ ವಾರ್ಷಿಕ ಕಂದಾಯ ಕಟ್ಟಲು 1928ರಲ್ಲಿ ಬ್ರಿಟಿಷ್ ಸರ್ಕಾರವು ಬರ್ಡೋಲಿ ತಾಲೂಕಿನ ರೈತರಿಗೆ ಆದೇಶ ನೀಡಿತು. ಆ ಹೊರೆಯನ್ನು ತಪ್ಪಿಸಬೇಕು ಎಂದು ಬರ್ಡೋಲಿ ರೈತರು ಅಹಮದಾಬಾದಿಗೆ ಬಂದು ಪಟೇಲರಲ್ಲಿ ವಿನಂತಿಸಿಕೊಂಡರು. ಪಟೇಲರ ನೇತೃತ್ವದಲ್ಲಿ ರೈತರೆಲ್ಲ ಚಳವಳಿ ಹೂಡಿದರು. ಪಟೇಲರು ಚಳವಳಿ ಮತ್ತಷ್ಟು ಬಿರುಸಾಗುವಂತೆ ನೋಡಿಕೊಂಡರು. ಮಹಾತ್ಮಾ ಗಾಂಧಿಯವರು ವಲ್ಲಭಭಾಯಿ ಪಟೇಲರಿಗೆ 'ಸರ್ದಾರ್' ಬಿರುದು ನೀಡಿದರು.

ಕೇವಲ 7 ರೂ. ಸಂಬಳಕ್ಕೆ ದುಡಿಯುತ್ತಿದ್ದ ಭಾರತೀಯ ನೌಕರರು ಸರ್ಕಾರಕ್ಕೆ ರಾಜೀನಾಮೆ ಸಲ್ಲಿಸುವಂತೆ ಮಾಡಿದರು. ಇದಕ್ಕೆ ಹೆದರಿದ ಸರ್ಕಾರ ಸಂಧಾನಕ್ಕೆ ಬಂತು ಆಗ ಪಟೇಲರು ದಸ್ತಗಿರಿ ಮಾಡಿದ್ದವರನ್ನು ಬಿಡುಗಡೆ ಮಾಡಿ, ಅವರ ಮೇಲಿನ ಮೊಕದ್ದಮೆ ಹಿಂಪಡೆಯಬೇಕು, ರಾಜೀನಾಮೆ ನೀಡಿದ್ದ ಸರ್ಕಾರಿ ನೌಕರರನ್ನೆಲ್ಲ ಮತ್ತೆ ಕೆಲಸಕ್ಕೆ ಸೇರಿಸಬೇಕು, ಎಲ್ಲ ಭೂಮಿಯನ್ನು ಅದರ ಮಾಲೀಕರಿಗೆ ನೀಡಬೇಕು ಎಂಬ ಇತ್ಯಾದಿ ಷರತ್ತುಗಳನ್ನು ಹಾಕಿ ಅವೆಲ್ಲವನ್ನೂ ಸರ್ಕಾರ ಒಪ್ಪುವಂತೆ ಮಾಡಿ ರೈತರ ಹಿತವನ್ನು ಕಾಪಾಡಿದ್ದರು. ಇದರಿಂದ ಖುಷಿಪಟ್ಟ ರೈತರು ಪಟೇಲರಿಗೆ ಜೈಕಾರ ಹಾಕಿ, 'ಸರ್ದಾರ್' ಎಂದು ಕರೆದರು.

ರಾಷ್ಟ್ರೀಯ ಏಕತೆಗೆ ವಿಶೇಷ ಕೊಡುಗೆ ನೀಡಿರುವ ಸರ್ದಾರ್ ಪಟೇಲರ ಸಂದೇಶಗಳನ್ನು ಸಾರಲು, ಅವರ ಕೊಡುಗೆಗಳನ್ನು ಪರಿಸಲು ಮತ್ತು ಏಕಕೆಯ ವಿಹಾಸದಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸಲು 2014ರಿಂದ ಅಕ್ಟೋಬರ್ 31ನ್ನು ರಾಷ್ಟ್ರೀಯ ಏಕತಾ ದಿನದ ರೂಪದಲ್ಲಿ ಆಚರಿಸಲಾಗುತ್ತಿದೆ. ಪ್ರತಿ ವರ್ಷ ಈ ದಿನದಂದು ದೇಶದ ಬಹುತೇಕ ಜಿಲ್ಲೆಗಳಲ್ಲಿ ಏಕತಾ ಓಟ ಆಯೋಜಿಸಲಾಗುತ್ತದೆ. ಕಳೆದ ವರ್ಷ 'ರನ್ ಫಾರ್ ಯೂನಿಟಿ ಮ್ಯಾರಥಾನ್'ದಲ್ಲಿ ಲಕ್ಷಾಂತರ ಜನರು ಪಾಲ್ಗೊಂಡಿದ್ದರು.

ಕೆವಾಡಿಯದಲ್ಲಿರುವ ಸರ್ದಾರ್ ಸರೋವರ್ ಅಣೆಕಟ್ಟಿನ ದಕ್ಷಿಣ-ಕ್ಕೆ ಸ್ಥಾಪಿಸಲಾಗಿರುವ 597 ಅಡಿಯ ಸರ್ದಾರ್ ಪಟೇಲ್ ಪ್ರತಿಮೆ ಪ್ರವಾಸಿಗರನ್ನು ಸೆಳೆಯುತ್ತಿದೆ. ವಿಶೇಷವೆಂದರೆ, ಅಮೆರಿಕದ ಸ್ಟ್ಯಾಚ್ಯು ಆಫ್ ಲಿಬರ್ಟಿಗೆ ಭೇಟಿ ನೀಡುವ ಪ್ರವಾಸಿಗರಿಗಿಂತ ಹೆಚ್ಚು ಪ್ರವಾಸಿಗರು ಇಲ್ಲಿ ಭೇಟಿ ನಿಡುತ್ತಿದ್ದಾರೆ. 2018 ಅಕ್ಟೋಬರ್ 31ರಂದು ಮಾನ್ಯ ನರೇಂದ್ರ ಮೋದಿ ಪಟೇಲರ ಈ ಭವ್ಯ ಪುತ್ಥಳಿಯನ್ನು ಅನಾವರಣಗೊಳಿಸಿದರು. 30 ಲಕ್ಷಕ್ಕಿಂತ ಅಧಿಕ ಪ್ರವಾಸಿಗರು ಇಲ್ಲಿ ಭೇಟಿ ನೀಡಿದ್ದು, ಇದರಿಂದ ಸುಮಾರು ಕೋಟಿ ಆದಾಯ ಬಂದಿದೆ. ಈ ದಿನವನ್ನು ಆಚರಿಸುವುದರಿಂದ ರಾಷ್ಟ್ರವು ಏಕತೆ, ಸಮಗ್ರತೆ ಮತ್ತು ಭದ್ರತೆಯನ್ನು ಹಿಡಿದಿಟ್ಟುಕೊಳ್ಳಲು ಶಕ್ತಿ ಮತ್ತು ಸ್ಥಿತಿಸ್ಥಾಪಕತ್ವವನ್ನು ಒದಗಿಸುತ್ತದೆ.

ಭಾರತವು ವೈವಿಧ್ಯತೆಯಲ್ಲಿ ಏಕತೆಯ ಭೂಮಿಯಾಗಿದ್ದು, ಈ ದಿನವನ್ನು ಉತ್ತೇಜಿಸುವ ವಿವಿಧ ಸಾಂಸ್ಕೃತಿಕ ಸಂಸ್ಥೆಗಳನ್ನು ಹೊಂದಿದೆ. ದೇಶಕ್ಕಾಗಿ ವ್ಯಕ್ತಿಗಳು ನೀಡಿದ ಕೊಡುಗೆಗಳೊಂದಿಗೆ ರಾಷ್ಟ್ರವನ್ನು ಪ್ರೇರೇಪಿಸಲು ನಾವು ಸರ್ದಾರ್ ಪಟೇಲ್ ಅವರಿಗೆ ನೀಡಬಹುದಾದ ದೊಡ್ಡ ಕೊಡುಗೆ ಸಲ್ಲಿಸುವ ಮೂಲಕ ಮತ್ತು ಈ ದಿನವನ್ನು ಯಾವಾಗಲೂ ಉತ್ಸಾಹದಿಂದ ಆಚರಿಸಬೇಕಿದೆ.



**– ಎಂ.ಎಚ್ ಸವದತ್ತಿ.**
ಸರ್ಕಾರಿ ಪ್ರೌಢಶಾಲೆ–ಏಕಲಾಸಪೂರ.

# ಹಳ್ಳಿಕೇರಿ ಪ್ರೌಢಶಾಲೆ ವಿದ್ಯಾರ್ಥಿಗಳ ಸಾಧನೆ



**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

2023–24ನೇ ಸಾಲಿನ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಮುಂಡರಗಿಯ ಸರಕಾರಿ ಪ್ರೌಡಶಾಲೆ ಹಳ್ಳಿಕೇರಿ ವಿದ್ಯಾರ್ಥಿಗಳಾದ ರಾಧಿಕಾ ವಾಸಪ್ಪ ಪೂಜಾರ ಎತ್ತರ ಜಿಗಿತದಲ್ಲಿ ಪ್ರಥಮ, ಸ್ವಪ್ನಾ ಗುಡ್ಡದ 800 ಮೀ ಓಟ ಹಾಗೂ 400 ಮೀ ಓಟದಲ್ಲಿ ಪ್ರಥಮ, ಅಕ್ಷತಾ ಸುರೇಶ ಬಾದಿಬಿನ್ನಾಳ 3000 ಮೀ ನಡಿಗೆಯಲ್ಲಿ ಪ್ರಥಮ, ವಿಜಯಲಕ್ಷ್ಮೀ ನಿಂಗಪ್ಪ ಮಲ್ಲನಾಯ್ಕರ 3000 ಮೀ ಓಟದಲ್ಲಿ ದ್ವಿತೀಯ, ರಾಘವೇಂದ್ರ ನಿಂಗಪ್ಪ ಮಲ್ಲನಾಯ್ಕರ 5000 ಮೀ ನಡಿಗೆಯಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ. ವಿಶೇಷ ಸಾಧನೆಗೈದ ವಿದ್ಯಾರ್ಥಿಗಳನ್ನು ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಕ ರಮೇಶ ಸವಡಿ ಅವರನ್ನು ಶಾಲೆಯ ಮುಖ್ಯೋಪಾಧ್ಯಾಯರು, ಸಿಬ್ಬಂದಿಗಳು ಅಭಿನಂದಿಸಿದ್ದಾರೆ.

# ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ನಿಮ್ಮದು



**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಭಾವೀ ಶಿಕ್ಷಕರು. ನಿಮ್ಮ ಮುಂದೆ ನೂರಾರು ಕನಸುಗಳನ್ನು ಹೊತ್ತು ಕಲಿಯುವ ಮಕ್ಕಳಿದ್ದಾರೆ. ಅವರ ಪ್ರತಿಭೆಗೆ ತಕ್ಕ ಕನಸುಗಳಿಗೆ ನೀರೆರೆದು, ಆ ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ರೂಪಿಸುವ ಜವಾಬ್ದಾರಿ ನಿಮ್ಮ ಕೈಯಲ್ಲಿದೆ. ಮಕ್ಕಳು ದುಶ್ಚಟಗಳಿಗೆ ಬಲಿಯಾಗಿ ಜೀವನ ಹಾಳುಮಾಡಿಕೊಳ್ಳುವ ಮುನ್ನ ಅವರಿಗೆ ಜ್ಞಾನದ ದೀಪ ಹಚ್ಚಿಸಿ ಅವರ ಬದುಕನ್ನು ಹಸನಾಗಿಸುವ ಕಾರ್ಯ ಮಾಡಬೇಕು ಎಂದು ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠದ ಉತ್ತರಾಧಿಕಾರಿ ಡಾ.ಮಲ್ಲಿಕಾರ್ಜುನ ಮಹಾಸ್ವಾಮಿಗಳು ಹೇಳಿದರು.

ಅವರು ಇಲ್ಲಿಯ ಜ.ಅ.ವಿ.ಸಮಿತಿಯ ಜ.ಅ.ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿರುವ 18ನೇ ವಾರ್ಷಿಕ ಸ್ನೇಹ ಸಮ್ಮೇಳನ ಮತ್ತು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳ ಬೀಳ್ಕೊಡುಗೆ ಸಮಾರಂಭದ ನೇತೃತ್ವ ವಹಿಸಿ ಆಶೀರ್ವಚನ ನೀಡಿದರು.

ಸಮಾರಂಭವನ್ನು ಉದ್ಘಾಟಿಸಿ ಆಶೀರ್ವಚನ ನೀಡಿದ ನಾಡೋಜ ಡಾ.ಅನ್ನದಾನೀಶ್ವರ ಸ್ವಾಮೀಜಿ, ಶಿಕ್ಷಕ ಯಾವಾಗಲೂ ಹೊಸತನ್ನು ಕಲಿಯಬೇಕು. ಮಕ್ಕಳ ವ್ಯಕ್ತಿತ್ವ ಬೆಳವಣಿಗೆಗೆ ಶ್ರಮವಹಿಸಬೇಕು ಎಂದರು. ತಾಲೂಕಾ ಕಸಾಪ ಅಧ್ಯಕ್ಷ ಪ್ರೊ. ಎಂ.ಜಿ ಗಚ್ಚಣ್ಣವರ ಮತ್ತು ಸವಣೂರ ಶಿಕ್ಷಣ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ. ಎಂ.ಆರ್ ಕುಲಕರ್ಣಿ ಮಾತನಾಡಿದರು.

ಈ ಸಂದರ್ಭದಲ್ಲಿ ನ್ಯಾಷನಲ್ ಐಕಾನಿಕ್ ಅವಾರ್ಡ್ ಪಡೆದ ಕಾಲೇಜಿನ ವಿದ್ಯಾರ್ಥಿ ಮಲ್ಲಿಕಾರ್ಜುನ ಹಡಪದ, ಆದರ್ಶ ಪ್ರಶಿಕ್ಷಣಾರ್ಥಿ ಪ್ರಶಸ್ತಿ ಪಡೆದ ಪರುಶುರಾಮ ಮಲ್ಲಿನಕೇರಿ, ಭಾವನಾ ಕೆ.ಆರ್ ಇವರನ್ನು ಸನ್ಮಾನಿಸಲಾಯಿತು. ಡಾ. ಬಿ.ಜೆ ಜವಳಿ, ಸವಣೂರಿನ ಶಿವಕುಮಾರ ದೇವರು, ಆರ್.ಬಿ ಡಂಬಳಮಠ, ಪ್ರಧಾನ ಕಾರ್ಯದರ್ಶಿ ಮಲ್ಲಪ್ಪ ಬಂಗಿ, ಪ್ರೊ. ರಾಜಶೇಖರ ಹುಲ್ಯಾಳ, ಶ್ರೀಕಾಂತ ಎಂ.ಎಲ್ ಇದ್ದರು. ಸಿ.ಎಸ್ ಅರಸನಾಳ ಸ್ವಾಗತಿಸಿದರು. ಎಸ್.ವಿ ಹಂಚಿನಾಳ ಕಾರ್ಯಕ್ರಮ ನಿರೂಪಿಸಿದರು. ಪ್ರೊ. ಕೃಷ್ಣಾ ಬೆಲೇರಿ ವಂದಿಸಿದರು.

# ಬೆಂಗಳೂರು ಬಸ್ ಗ್ಯಾರೇಜ್‌ನಲ್ಲಿ ಬೆಂಕಿ ಅನಾಹುತ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಬೆಂಗಳೂರಿನ ಬಸ್ ಗ್ಯಾರೇಜ್ ನಲ್ಲಿ ಸಂಭವಿಸಿದ ಭೀಕರ ಅಗ್ನಿ ದುರಂತದಲ್ಲಿ 20ಕ್ಕೂ ಹೆಚ್ಚು ಬಸ್ ಗಳು ಬೆಂಕಿಗಾಹುತಿಯಾಗಿದ್ದು, ಘಟನಾ ಸ್ಥಳಕ್ಕೆ ಡಿಸಿಎಂ ಡಿಕೆ ಶಿವಕುಮಾರ್ ಮತ್ತು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೆಂಗಳೂರಿನ ಹೊಸಕೆರೆಹಳ್ಳಿಯ ವೀರಭದ್ರನಗರದ ಸಮೀಪದಲ್ಲಿರುವ ಖಗಿ ಕೋಚ್ ಬಸ್ ಬಾಡಿಬಿಲ್ಡರ್ಸ್ ಮತ್ತು ಗ್ಯಾರೇಜ್ ನಲ್ಲಿ ಇಂದು ಬೆಳಗ್ಗೆ ಭಾರೀ ಬೆಂಕಿ ಕಾಣಿಸಿಕೊಂಡು ನಿಂತಿದ್ದ 20ಕ್ಕೂ ಹೆಚ್ಚು ಬಸ್‌ಗಳು ಸುಟ್ಟು ಕರಕಲಾಗಿವೆ. ಗ್ಯಾರೇಜ್‌ನಲ್ಲಿ ನಿಂತಿದ್ದ ಬಸ್ ಒಂದರ ಭಾಗಕ್ಕೆ ವೆಲ್ಡಿಂಗ್ ಕೆಲಸ ಮಾಡುತ್ತಿದ್ದಾಗ ಬೆಂಕಿ ಕಾಣಿಸಿಕೊಂಡಿದೆ.

ಪ್ರಾಥಮಿಕ ತನಿಖೆಯ ಪ್ರಕಾರ, ವೆಲ್ಡಿಂಗ್ ಯಂತ್ರದಿಂದ ಕಿಡಿ ಹಾರಿದ್ದು ಇದು ಬೆಂಕಿ ಅವಘಡಕ್ಕೆ ಕಾರಣವಾಯಿತು. ಬಳಿಕ ಒಂದರನಂತರ ಒಂದು ಬಸ್ ಗೆ ಬೆಂಕಿ ವ್ಯಾಪಿಸಿದೆ ಎಂದು ನಾವು ಶಂಕಿಸಿದ್ದೇವೆ. ಬೆಂಕಿ ನಂತರ ಗ್ಯಾರೇಜ್‌ನಲ್ಲಿ ನಿಲ್ಲಿಸಲಾಗಿದ್ದ ಇತರ ಬಸ್‌ಗಳಿಗೆ ಹರಡಿ ಭಾರೀ ಹಾನಿಯನ್ನುಂಟುಮಾಡಿತು" ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬೆಂಕಿಯನ್ನು ನಂದಿಸಲು ಹಲವಾರು ಅಗ್ನಿಶಾಮಕ ವಾಹನಗಳನ್ನು ಸೇವೆಗೆ ನಿಯೋಜಿಸಲಾಗಿತ್ತು. ಸುಮಾರು 18 ಬಸ್‌ಗಳು ಸಂಪೂರ್ಣವಾಗಿ ಸುಟ್ಟುಹೋಗಿವೆ ಮತ್ತು ನಾಲ್ಕು ಭಾಗಶಃ ಹಾನಿಗೊಳಗಾಗಿವೆ. ಗ್ಯಾರೇಜ್‌ನಲ್ಲಿ 35 ಬಸ್‌ಗಳಿದ್ದವು. ಈ ಪೈಕಿ 20ಕ್ಕೂ ಹೆಚ್ಚು ಬಸ್‌ಗಳಿಗೆ ಬೆಂಕಿ ಹೊತ್ತಿಕೊಂಡಿದೆ.

# ಪುನೀತ್ ರಾಜಕುಮಾರ್‌ರ 2ನೇ ವರ್ಷದ ಪುಣ್ಯಸ್ಮರಣೆ

**■ವಿಜಯಸಾಕ್ಷಿ ಸುದ್ದಿ, ಗದಗ**



ಅಖಿಲ ಕರ್ನಾಟಕ ಡಾ. ರಾಜ್‌ಕುಮಾರ್ ಅಭಿಮಾನಿಗಳ ಸಂಘ, ಡಾ. ಶಿವರಾಜ್ ಕುಮಾರ್ ಅಭಿಮಾನಿಗಳ ಸಂಘ ಹಾಗೂ ಯುವರತ್ನ ಪುನೀತ್ ರಾಜ್‌ಕುಮಾರ್ ಅಭಿಮಾನಿಗಳ ಸಂಘ ಗದಗ ವತಿಯಿಂದ ಖ್ಯಾತ ಚಿತ್ರನಟ ಪುನೀತ್‌ರಾಜಕುಮಾರ ಅವರ 2ನೇ ಪುಣ್ಯಸ್ಮರಣೆಯನ್ನು ಪುನೀತ್ ರಾಜ್‌ಕುಮಾರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಸಲ್ಲಿಸಿ ಅಭಿಮಾನಿಗಳಿಗೆ ಅನ್ನಸಂತರ್ಪಣೆ ನೆರವೇರಿಸುವ ಮೂಲಕ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಸಂಘದ ಗದಗ ಜಿಲ್ಲಾಧ್ಯಕ್ಷ ವಿಠ್ಠಲ ಪರಾಪುರ, ಗದಗ ಜಿಲ್ಲಾ ಮಹಿಳಾ ಅಧ್ಯಕ್ಷೆ ರೇಖಾ ಬಂಗಾರಶೆಟ್ಟರ್, ಪ್ರಧಾನ ಕಾರ್ಯದರ್ಶಿ ಮೇಘನಾ ಎನ್. ಕೊಟ್ಟೂರ, ಸ್ವಾತಿ ಅಕ್ಕಿ, ದೀಪಾ ಚೌಡಾಪೂರ, ಮಂಜುಳಾ, ಗೌರವಾಧ್ಯಕ್ಷ ರಾಘವೇಂದ್ರ ಪರಾಪೂರ, ಖಜಾಂಚಿ ಗಣೇಶ ಹುಬ್ಬಳ್ಳಿ, ಜಿಲ್ಲಾ ಉಪಾಧ್ಯಕ್ಷ ನಾಗರಾಜ ಗುತ್ತಿ, ಶಹರಾಧ್ಯಕ್ಷ ಮಲ್ಲೇಶ ಪರಾಪೂರ, ಪ್ರಧಾನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ಸಂಗಾಪುರ, ಅಶೋಕ ಹೂಗಾರ, ಪಂಪೇಶ ಪರಾಪೂರ, ಓಣಿಯ ಹಿರಿಯರಾದ ಶಿವು ಕೋಟ್ನಿಕಲ್, ರೇಣವ್ವ ಪರಾಪೂರ, ಪದ್ಮಾವತಿ ಸಂಗಾಪೂರ, ವೆಂಕಮ್ಮ, ನಾಗರಾಜ ಅಗಸಿನಕೊಪ್ಪ, ಉದಯ ಸಂಗಾಪೂರ, ಗಿರೀಶ, ಯಮನೇಶ ಸೇರಿದಂತೆ ಅಭಿಮಾನಿಗಳು ಉಪಸ್ಥಿತರಿದ್ದರು.

# ಡಾ. ಪುನೀತ್‌ರಾಜಕುಮಾರ ಪುಣ್ಯಸ್ಮರಣೆ, ಅನ್ನಸಂತರ್ಪಣೆ

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ವಾರ್ಡ್ ನಂ.35ರ ಶ್ರೀರಾಮ ನಗರ ಸುಡುಗಾಡು ಸಿದ್ಧರ ಸಮಾಜದ ಯುವಕರ ಬಳಗದ ವತಿಯಿಂದ ಕರ್ನಾಟಕ ರತ್ನ ಡಾ. ಪುನೀತ್‌ರಾಜಕುಮಾರ ಅವರ 2ನೇ ವರ್ಷದ ಪುಣ್ಯಸ್ಮರಣೆ ಹಾಗೂ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ದುರಗೇಶ ವಿಭೂತಿ, ಹಿಂದುಳಿದ, ಅಶಕ್ತರಿಗಾಗಿ ಪುನೀತರಾಜಕುಮಾರ ಅವರ ಸೇವೆ ಹೆಮ್ಮೆ ಪಡುವಂತಿದೆ. ಎಲೆಮರೆಯ ಕಾಯಂತೆ ಸೇವೆಗೈದು ನಮ್ಮೆನ್ನೆಲ್ಲ ಅಗಲಿದ್ದರೂ, ಅವರ ಜೀವನದ ಜ್ಯೋತಿ ನಮ್ಮೆಲ್ಲರ ಹೃದಯದಲ್ಲಿ ಅಜರಾಮರವಾಗಿ ಬೆಳಗುವಂತೆ ಮಾಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸುಡುಗಾಡು ಸಿದ್ಧರ ಸಮಾಜದ ಯುವಕರ ಬಳಗದ ಶಿವಪ್ಪ ವಿಭೂತಿ, ರಘು ಗಡ್ಡದವರ, ಗಂಗಾಧರ ಕಲ್ಯಾಣದವರ, ವೆಂಕಟೇಶ ವಿಭೂತಿ, ಸಣ್ಣಯಲ್ಲಪ್ಪ, ಕಂಟೆಪ್ಪ, ಕೆಂಪಯ್ಯ, ಶಾಮಣ್ಣ ಗಡ್ಡದವರ, ಮಣಿಕಂಠ, ಬಸವರಾಜ, ಯಲ್ಲಪ್ಪ, ರಮೇಶ, ಹುಸೇನಪ್ಪ ಎಂ.ಜಿ., ಮುದ್ದಣ್ಣ, ಪ್ರಕಾಶ ಕಲ್ಯಾಣದವರ, ಅಶೋಕ ಗಡ್ಡದವರ, ಹುಸೇನಪ್ಪ ಗಡ್ಡದವರ, ಆನಂದ, ಮಲ್ಲೇಶಪ್ಪ, ದುರಗೇಶ, ಹನುಮಂತ, ನಾರಾಯಣ, ಪ್ರಜ್ವಲ್, ಮಾಯಪ್ಪ, ಯಲ್ಲಪ್ಪ, ಶಾಮಣ್ಣ ಜಿ.ಕೆ., ಲಕ್ಷ್ಮಣ, ಶಂಕ್ರಪ್ಪ, ಮರಿಸ್ವಾಮಿ, ಜಂಬಣ್ಣ ಕಿನ್ನರಿ, ದುರಗಪ್ಪ ಜಿ.ವಿ., ಸಣ್ಣಹುಸೇನಪ್ಪ ಎಂ.ವಿ., ಗಾಳೆಪ್ಪ, ಚಂದ್ರಶೇಖರ, ಗೋಪಾಲ, ಗೋವಿಂದ, ಶಿವಕುಮಾರ ಮುಂತಾದವರು ಉಪಸ್ಥಿತರಿದ್ದರು.



### ಬಸವ ದಳದ 'ಶರಣ ಸಂಗಮ' ಕಾರ್ಯಕ್ರಮದಲ್ಲಿ ಶರಣೆ ಮಂಜುಳಾ ಹಾಸಿಲ್‌ಕರ ಉಪನ್ಯಾಸ

# ಪೂಜ್ಯರ ಬಸವ ತತ್ವಗಳ ನಿಷ್ಠೆ ಅಪೂರ್ವವಾದುದು

**■ವಿಜಯಸಾಕ್ಷಿ ಸುದ್ದಿ, ಗದಗ**



ಪೂಜ್ಯ ಲಿಂ. ಸಿದ್ಧಲಿಂಗ ಮಹಾಸ್ವಾಮಿಗಳು ಮಠದ ಶಿವಾನುಭವಕ್ಕೆ ಹೊಸ ವ್ಯಾಖ್ಯೆ ಬರೆದರು. ಶಿವಾನುಭವವೆಂದರೆ ಬರೀ ಪುರಾಣ, ಭಜನೆಯಂತಹ ಧಾರ್ಮಿಕ ಕಾರ್ಯಕ್ರಮಗಳಿಗೆ ಮಾತ್ರ ಸಿಮೀತ ಎಂಬ ಕಲ್ಪನೆಯನ್ನು ತೊಡೆದುಹಾಕಿ, ಅಲ್ಲಿ ವಿವಿಧ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಟ್ಟರು. ಶಿಕ್ಷಣ, ಕೃಷಿ, ಸಂಗೀತ, ಕಲೆ, ಸಾಹಿತ್ಯಗಳಂತಹ ಅನೇಕ ಸಮಾಜೋಪಯೋಗಿ ಕಾರ್ಯಕ್ರಮಗಳು ನಡೆಯುವಂತೆ ಮಾಡಿದರು. ಆಯಾ ರಂಗದ ತಜ್ಞರನ್ನು ಕರೆಯಿಸಿ ಉಪನ್ಯಾಸ ಏರ್ಪಡಿಸುತ್ತಿದ್ದರು. ಶಿವಾನುಭವ ದೊಡ್ಡ ಪ್ರಮಾಣದಲ್ಲಿ ಜನರನ್ನು ಆಕರ್ಷಿಸಿತು ಎಂದು ಶರಣೆ ಮಂಜುಳಾ ಹಾಸಿಲ್‌ಕರ ನುಡಿದರು.

ರವಿವಾರ ಬಸವ ಮಂಟಪದಲ್ಲಿ ನಡೆದ ಬಸವ ದಳದ 1565ನೇ ಶರಣ ಸಂಗಮ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡುತ್ತಿದ್ದರು.

ಪೂಜ್ಯರ ಮತ್ತೊಂದು ಮೈಲುಗಲ್ಲೆಂದರೆ ಗೋಕಾಕ ಚಳುವಳಿ. ಇಲ್ಲಿ ಪೂಜ್ಯರ ಪಾತ್ರ ಮಹತ್ವದ್ದಾಗಿತ್ತು. ಸ್ವತಃ ಸ್ವಾಮೀಜಿಯವರೇ ಈ ಚಳುವಳಿಯ ನೇತೃತ್ವ ವಹಿಸಿದ್ದರು. ಅಂದು ಗದಗ ತಹಸೀಲ್ದಾರ ಕಚೇರಿ ಮುಂದೆ ಅವರು ಮಠದ ಭಕ್ತರು, ಕನ್ನಡಾಭಿಮಾನಿಗಳನ್ನು ಒಗ್ಗೂಡಿಸಿ ನಡೆಸಿದ ಸತ್ಯಾಗ್ರಹ ಎಂದಿಗೂ ಮರೆಯಲಾಗದು. ನಾಡು, ನುಡಿ ಸಂರಕ್ಷಣೆಯ ವಿಷಯದಲ್ಲಿ ಪೂಜ್ಯರು ಸದಾ ಮುಂಚೂಣಿಯಲ್ಲಿರುತ್ತಿದ್ದರು.

ತಮ್ಮ ಮಠದ ವತಿಯಿಂದ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಜ್ಞಾನದಾಸೋಹದಂತಹ ಮಹತ್ತರವಾದ ಕೆಲಸ ಮಾಡಿದರು. ಇಂದು ತೋಂಟದಾರ್ಯ ವಿದ್ಯಾಪೀಠವು ನಾಡಿನ ಮಹತ್ವದ ಶಿಕ್ಷಣ ಸಂಸ್ಥೆಗಳಲ್ಲಿ ಎದ್ದು ಕಾಣುವಂತಹ ಶಿಕ್ಷಣಸಂಸ್ಥೆಯಾಗಿದೆ. ಪೂಜ್ಯರ ಬಸವ ತತ್ವಗಳ ಬಗ್ಗೆ ನಿಷ್ಠೆ ಅಪೂರ್ವವಾದುದು. ಮೂಢನಂಬಿಕೆಗಳನ್ನು ಸದಾ ಖಂಡಿಸುತ್ತಿದ್ದ ಅವರು ಮಠದ ಜಾತ್ರೆಯ ಸಂದರ್ಭದಲ್ಲಿ ತೇರಿನ ಗಾಲಿಗೆ ಹಾಕುತ್ತಿದ್ದ ಅನ್ನಪ್ರಸಾದ ನಿಲ್ಲಿಸಿದರು. ಅಂದು ಅಡ್ಡ ಪಲ್ಲಕ್ಕಿಯನ್ನು ನಿಲ್ಲಿಸಿ, ಭಕ್ತರ ಮೇಲೆ ಮೆರೆವಾತ ಸ್ವಾಮಿಯಲ್ಲವೆಂದರು. ಜೊತೆಗೆ ನಾಗರ ಪಂಚಮಿಯಂದು ಕಲ್ಲು ನಾಗರಕ್ಕೆ ಹಾಲೆರೆದು ಅದನ್ನು ಮಣ್ಣುಪಾಲು ಮಾಡಬೇಡಿರೆಂದು ಅದೇ ಹಾಲನ್ನು ಮಕ್ಕಳು, ವೃದ್ಧರಿಗೆ, ರೋಗಿಗಳಿಗೆ ನೀಡುವ ಮೂಲಕ ನಾಗರ ಪಂಚಮಿಯನ್ನು ಹಾಲು ಕುಡಿಸುವ ಹಬ್ಬವಾಗಿ ಆಚರಿಸಿದರು ಎಂದರು.

ಇದೇ ಸಂದರ್ಭದಲ್ಲಿ ಶರಣ ರೇ. ಉತ್ತಂಗಿ ಚೆನ್ನಪ್ಪನವರ ಬಗ್ಗೆ ಮಾತನಾಡಿದ ಶರಣ ಎಮ್.ಬಿ ಲಿಂಗಧಾಳ, ಉತ್ತಂಗಿ ಚೆನ್ನಪ್ಪನವರು ಮೂಲತಃ ಕ್ರೈಸ್ತ ಫಾದರಿಯಾಗಿದ್ದರು. ಆದರೆ ಅವರು ಬಸವಾದಿ ಶರಣರ ತತ್ವ-ಸಿದ್ಧಾಂತಗಳಿಂದ ತುಂಬ ಆಕರ್ಷಿತರಾಗಿದ್ದರು. ಶರಣ ತತ್ವಗಳ ಬಗ್ಗೆ ಸತತ ಅಧ್ಯಯನ, ಸಂಶೋಧನೆಗಳ ಮೂಲಕ ಈ ನಾಡಿನ ಜನತೆಗೆ ಶರಣರ ಬಗ್ಗೆ ಅನೇಕ ವಿಚಾರಗಳನ್ನು ಮನವರಿಕೆ ಮಾಡಿಕೊಟ್ಟರು. ಅಂದು ಮೂಢನಂಬಿಕೆಗಳ, ಬಹುದೇವೋಪಾಸಕರಾಗಿದ್ದ ಲಿಂಗವಂತರಿಗೆ ಅವರ ಆಚರಣೆ ಏಕದೇವೋಪಾಸನೆ ಎಂದು ತಿಳಿಸಿಕೊಟ್ಟರು. ಉತ್ತಂಗಿಯವರು ತಮ್ಮ ವಚನಗಳ ಸಂಶೋಧನೆಯ ಮೂಲಕ 'ಅನುಭವ ಮಂಟಪದ ಐತಿಹಾಸಿಕತೆ' ಎಂಬ ಪುಸ್ತಕವನ್ನು ಬರೆದರು. ಇದೊಂದು ಮಹತ್ತ ಸಂಶೋಧನೆ. ಜೊತೆಗೆ ಸಿದ್ಧರಾಮೇಶ್ವರರ ಬಗ್ಗೆ ಪುಸ್ತಕ ರಚಿಸಿದರು. ಅಲ್ಲದೇ ಸರ್ವಜ್ಞನ ಬಗ್ಗೆ ಅವರ ವಚನಗಳನ್ನು ಸಂಶೋಧಿಸಿ ಪ್ರಕಟಿಸುವ ಮೂಲಕ ಲಿಂಗಾಯತ ಧರ್ಮಕ್ಕೆ ಮಹತ್ತರ ಉಪಕಾರಗೈದರೆಂದು ಅನೇಕ ಉದಾಹರಣೆಗಳ ಮೂಲಕ ಲಿಂಗಧಾಳ ಶರಣರು ತಿಳಿಸಿದರು. ಸಭೆಯಲ್ಲಿ ಉಪಸ್ಥಿತರಿದ್ದ ಅತಿಥಿಗಳಾಗಿದ್ದ ಪ್ರೊ. ಕೆ.ಎಚ್ ಬೇಲೂರ ಹಾಗೂ ಸಭೆಯ ಅಧ್ಯಕ್ಷತೆ ವಹಿಸಿದ್ದ ಬಸವದಳದ ಅಧ್ಯಕ್ಷರಾದ ವ್ಹಿ.ಕೆ ಕರಿಗೌಡರ ಸಂದರ್ಭೋಚಿತವಾಗಿ ಮಾತನಾಡಿದರು.

ಶರಣ ಹಕಾರಿ ಗುರುಗಳು ಸ್ವಾಗತಿಸಿದರು. ಶರಣ ಪ್ರಕಾಶ ಅಸುಂಡಿಯವರು ಕಾರ್ಯಕ್ರಮ ನಿರೂಪಿಸಿದರು. ಶರಣು ಸಮರ್ಪಣೆಯನ್ನು ಶರಣೆ ಮಂಗಳಕ್ಕ ಕಾಮಣ್ಣನವರ ಮಾಡಿದರು. ವಚನ ಮಂಗಲದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

> ಶ್ರೀಗಳ ಸಮಾಜಮುಖಿ ಕಾರ್ಯಗಳನ್ನು ಗುರುತಿಸಿ ಕೇಂದ್ರ ಸರ್ಕಾರವು ಅವರಿಗೆ ರಾಷ್ಟ್ರೀಯ ಕೋಮುಸೌಹಾರ್ದತೆ ಪ್ರಶಸ್ತಿ ನೀಡಿ ಗೌರವಿಸಿತು. ಅಲ್ಲದೇ ಪೂಜ್ಯರಿಗೆ ಡಾಕ್ಟರೇಟ್ ಪ್ರಶಸ್ತಿ ಬಂದಿತು. ಇಂದು ಪೂಜ್ಯರು ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿರಬಹುದು, ಆದರೆ ಅವರು ಮಾಡಿದ ಸಾಧನೆಗಳ ಮೂಲಕ ನಮ್ಮ ಮನದಲ್ಲಿದ್ದಾರೆ. ಪೂಜ್ಯರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ಸಾಗಬೇಕಿದೆ ಎಂದು ಶರಣೆ ಮಂಜುಳಾ ಹಾಸಿಲ್‌ಕರ ನುಡಿದರು.


### ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ ನಡೆದ 73ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ ಗೆಹ್ಲೋಟ್

# ಸಾಮರಸ್ಯ ಸಮಾಜ ನಿರ್ಮಾಣಕ್ಕಾಗಿ ಕೈಜೋಡಿಸಿ



■ ವಿಜಯಸಾಕ್ಷಿ ಸುದ್ದಿ, ಧಾರವಾಡ

ಹಲವಾರು ದಶಕಗಳಿಂದ ಕರ್ನಾಟಕ ವಿಶ್ವವಿದ್ಯಾಲಯ ರಾಜ್ಯದ ಶೈಕ್ಷಣಿಕ ಅಭಿವೃದ್ಧಿಯಲ್ಲಿ ಪಾಲ್ಗೊಂಡಿದೆ. ರಾಷ್ಟ್ರ-ಅಂತಾರಾಷ್ಟ್ರೀಯ ಮಟ್ಟದ ಖ್ಯಾತ ಸಾಹಿತಿಗಳನ್ನು, ಬರಹಗಾರರನ್ನು, ಶಿಕ್ಷಣ ಪ್ರೇಮಿಗಳನ್ನು, ಸಮಾಜ ಸುಧಾರಕರನ್ನು, ಸಂಗೀತಗಾರರನ್ನು ನೀಡಿದೆ ಎಂದು ರಾಜ್ಯಪಾಲ ಥಾವರಚಂದ ಗೆಹ್ಲೋಟ್ ಹೇಳಿದರು.

ಅವರು ಸೋಮವಾರ ಬೆಳಿಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ಗಾಂಧಿ ಭವನದಲ್ಲಿ 73ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಪದವಿಗಳನ್ನು ವಿತರಿಸಿ, ಮಾತನಾಡಿದರು.

ನಮ್ಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯವು ಬಹಳ ಪುರಾತನವಾಗಿದೆ ಮತ್ತು ಪ್ರಾಚೀನ ಕಾಲದಿಂದಲೂ, ವಸುಧೈವ ಕುಟುಂಬಕಂ ತತ್ವಶಾಸ್ತ್ರ ಮತ್ತು ಧ್ಯಾನವನ್ನು ಕೇಂದ್ರೀಕರಿಸುತ್ತದೆ. ಇದು ವಿಶ್ವ ಸಹೋದರತ್ವ, ವಿಶ್ವ ಶಾಂತಿ, ಸಮಾನತೆ ಮತ್ತು ಸಾಮರಸ್ಯವನ್ನು ಕಲಿಸುತ್ತದೆ. ಕರ್ನಾಟಕ ರಾಜ್ಯವು ದೇಶದ ಪ್ರಗತಿಪರ ರಾಜ್ಯವಾಗಿದ್ದು, ಹುಬ್ಬಳ್ಳಿ-ಧಾರವಾಡವು ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎಂದು ಕರೆಯಲ್ಪಡುತ್ತದೆ, ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿ, ಧಾರವಾಡವು ಜಗತ್ತಿಗೆ ಅನೇಕ ರತ್ನಗಳನ್ನು ನೀಡಿದೆ. ಕರ್ನಾಟಕ ವಿಶ್ವವಿದ್ಯಾಲಯವು ರಾಜ್ಯದ ಎರಡನೇ ಅತ್ಯಂತ ಹಳೆಯ ವಿಶ್ವವಿದ್ಯಾಲಯವಾಗಿದೆ. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಈ ವಿಶ್ವವಿದ್ಯಾಲಯ ಹಲವು ಸಾಧನೆ ಮಾಡಿದೆ ಎಂದು ಶ್ಲಾಘಿಸಿದರು.

ಜೀವನದ ಯಶಸ್ಸಿನಲ್ಲಿ ಶಿಕ್ಷಣವು ಬಹುದೊಡ್ಡ ಕೊಡುಗೆಯನ್ನು ಹೊಂದಿದೆ, ಶಿಕ್ಷಣವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಉಪಯುಕ್ತವಾಗಿದೆ, ಒಬ್ಬ ವ್ಯಕ್ತಿಯು ಶಿಕ್ಷಣ ಪಡೆದಾಗ ಮಾತ್ರ ಅವನ ಅಭಿವೃದ್ಧಿಯಾಗುತ್ತದೆ. ಪ್ರಸ್ತುತ ಸ್ವಯಂ ಉದ್ಯೋಗವನ್ನು ಉತ್ತೇಜಿಸುವ ಅವಶ್ಯಕತೆಯಿದೆ. ಇಂದು ಜಗತ್ತಿನಲ್ಲಿ ಪ್ರಾಜೆಕ್ಟ್ ಆಧಾರಿತ ಕಲಿಕೆಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಇದಕ್ಕಾಗಿ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳನ್ನು ಸ್ವಯಂ ಉದ್ಯೋಗಿಗಳನ್ನಾಗಿ ಮಾಡಲು ನಾವೀನ್ಯತೆ ಮತ್ತು ಉದ್ಯಮಶೀಲತಾ ಕಡೆಗೆ ಕೆಲಸ ಮಾಡಬೇಕಾಗಿದೆ ಎಂದು ತಿಳಿಸಿದರು.

ಅತಿಥಿಗಳಾಗಿ ಪಾಲ್ಗೊಂಡಿದ್ದ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಮಾತನಾಡಿ, ದೇಶದ ಹಳೆಯ ವಿಶ್ವ ವಿದ್ಯಾಲಯಗಳಲ್ಲೊಂದಾದ ಕರ್ನಾಟಕ ವಿಶ್ವವಿದ್ಯಾಲಯವು ಶಿಕ್ಷಣ, ಸಾಹಿತ್ಯ, ವಿಜ್ಞಾನ, ತಂತ್ರಜ್ಞಾನ ಅಭಿವೃದ್ಧಿಯಲ್ಲಿ ಸಾಕಷ್ಟು ರೀತಿಯ ಕೊಡುಗೆಗಳನ್ನು ನೀಡಿ, ರಾಜ್ಯದ ಅಭಿವೃದ್ಧಿಯಲ್ಲಿ ಪಾಲ್ಗೊಂಡಿದೆ. ಯುವ ಪೀಳಿಗೆಯು ಈ ದೇಶದ ಆಸ್ತಿ, ಕಠಿಣ ಪರಿಶ್ರಮ ಶ್ರದ್ಧೆಯಿಂದ ಉನ್ನತ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಸಮಾಜದ ಪ್ರಗತಿಯಲ್ಲಿ ಪಾಲ್ಗೊಳ್ಳಬೇಕು. ಉನ್ನತ ಶಿಕ್ಷಣದ ಸಂಶೋಧನೆಯಲ್ಲಿ ಪಾಲ್ಗೊಂಡು ದೇಶದ ಆರ್ಥಿಕ ಪ್ರಗತಿಯಲ್ಲಿ ಸಹಕರಿಸಬೇಕೆಂದು ಹೇಳಿದರು.

ಆಧುನಿಕ ಜ್ಞಾನ-ವಿಜ್ಞಾನದಿಂದ ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿಯೂ ಉತ್ತಮ ಬೆಳವಣಿಗೆಯಾಗುತ್ತಿದೆ. ಕರ್ನಾಟಕ ವಿಶ್ವವಿದ್ಯಾಲಯ ಹಲವಾರು ಸಂಸ್ಥೆಗಳ ಜೊತೆ ಒಡಂಬಡಿಕೆ ಮಾಡಿಕೊಂಡಿದ್ದು, ಮುಂಬರುವ ದಿನಗಳಲ್ಲಿ ಉತ್ತಮ ಯಶಸ್ಸು ಕಾಣಲಿದೆ ಎಂದು ಸಚಿವರು ತಿಳಿಸಿದರು. ಕ.ವಿ.ವಿ.ಕುಲಪತಿ ಪ್ರೊ. ಕೆ.ಬಿ. ಗುಡಸಿ, ಕುಲಸಚಿವರು, ಸಿಂಡಿಕೇಟ್ ಸದಸ್ಯರು, ಕೌನ್ಸಿಲ್ ಸದಸ್ಯರು, ಅಕಾಡೆಮಿಯ ಸದಸ್ಯರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅರವಿಂದ ಜತ್ತಿ, ಅರ್ಚನಾ ಸುರಾನಾ ಮತ್ತು ರವಿಶಂಕರ್ ಭೂಪಳಾಪುರ ಅವರುಗಳಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಹಾಗೂ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ಪಿ.ಎಚ್.ಡಿ. ಪದವಿಯನ್ನು ಪ್ರದಾನ ಮಾಡಲಾಯಿತು.

> ಈ ದೇಶದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿಯುವ ಕೆಲಸವನ್ನು ಈ ವಿಶ್ವವಿದ್ಯಾಲಯ ನಿರಂತರವಾಗಿ ಮಾಡಿದೆ. ಈಗಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆದು ಸ್ವಾವಲಂಬಿಗಳಾಗಿ ಆತ್ಮನಿರ್ಭರ ಭಾರತ ನಿರ್ಮಿಸುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಿದೆ. ದೇಶದ ಜ್ಞಾನ, ಸಂಸ್ಕೃತಿ, ಪರಂಪರೆ ವಿಶ್ವಕ್ಕೆ ಮಾದರಿಯಾಗಿದೆ. ಅನಾದಿಕಾಲದಿಂದಲೂ ಈ ದೇಶದಲ್ಲಿ ಜ್ಞಾನದ ಪ್ರಸಾರ ಮಾಡಲಾಗುತ್ತಿದೆ, ಸಿಂಧೂ ನಾಗರಿಕತೆ, ನಳಂದಾ, ತಕ್ಷಶಿಲಾ ವಿಶ್ವವಿದ್ಯಾಲಯಗಳು ಇದಕ್ಕೆ ಉದಾಹರಣೆಯಾಗಿವೆ. ಭೌತಿಕ ಸಂಪತ್ತಿಗಿಂತ ಜ್ಞಾನದ ಸಂಪತ್ತು ಅತಿ ಮುಖ್ಯ. ಯುವಕರು ಈ ದೇಶದ ಪ್ರಗತಿಯಲ್ಲಿ ಪಾಲ್ಗೊಂಡು ಸಮಾಜದ ಸರ್ವಾಂಗೀಣ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕು. ಭಾರತವು ಈಗ ವಿಶ್ವದ 5ನೇ ಆರ್ಥಿಕ ರಾಷ್ಟ್ರವಾಗಿದೆ. ಸದೃಢ ರಾಷ್ಟ್ರ ನಿರ್ಮಾಣ, ಪರಿಸರ ನಿಸರ್ಗ ಸಂಪತ್ತು ಸಂರಕ್ಷಣೆಯಲ್ಲಿ ಯುವಕರು ಪಾಲ್ಗೊಳ್ಳಬೇಕು.
>
> – **ಥಾವರಚಂದ ಗೆಹ್ಲೋಟ್**, ರಾಜ್ಯಪಾಲರು.



ಘಟಿಕೋತ್ಸವದಲ್ಲಿ 147 ಚಿನ್ನದ ಪದಕಗಳನ್ನು 265 ಪಿಎಚ್‌ಡಿ ಪದವಿಗಳನ್ನು ವಿತರಿಸಲಾಯಿತು. ಕನ್ನಡ ಅಧ್ಯಯನ ಕೇಂದ್ರದ ನೇಹಾ ಸಜಲಿ ಹಾಗೂ ಸಮೂಹ ಸಂವಹನ ಪತ್ರಿಕೋದ್ಯಮ ವಿಭಾಗದ ದಾದಾಗೌಡ ಪಾಟೀಲ್ ತಲಾ 9 ಚಿನ್ನದ ಪದಕಗಳನ್ನು ಪಡೆದುಕೊಂಡರು. ಜೀವರಸಾಯನ ಶಾಸ್ತ್ರದ ಶುಭ ಲಕ್ಷ್ಮೀನಾರಾಯಣ ಹೆಗಡೆ, ಪ್ರಾಣಿ ಶಾಸ್ತ್ರದ ಎಂ.ಪಿ. ಪವನ್‌ಕುಮಾರ್ ಹಾಗೂ ಗ್ರಂಥಾಲಯ ವಿಭಾಗದ ಸೌಮ್ಯ ಬ್ಯಾಡಗಿ ತಲಾ 8 ಚಿನ್ನದ ಪದಕಗಳನ್ನು ಹಾಗೂ ರಸಾಯನ ಶಾಸ್ತ್ರ ವಿಭಾಗದ ಶ್ರೇಯಾ. ಯು. ಪ್ರಭು 7 ಚಿನ್ನದ ಪದಕಗಳನ್ನು ಪಡೆದುಕೊಂಡರು.

## ಅಲ್ಪಸಂಖ್ಯಾತರ ಕಾನೂನು ಪದವೀಧರರಿಂದ ಅರ್ಜಿ ಆಹ್ವಾನ

▶▶ ಮೊದಲನೇ ಪುಟದಿಂದ

ನವೆಂಬರ್ 16 ರಂದು ಸಾಯಂಕಾಲ 5.30 ಗಂಟೆಯೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ.

ತರಬೇತಿಯನ್ನು ಗದಗ ಜಿಲ್ಲೆಯಲ್ಲಿಯೇ ನೀಡಲಾಗುವುದು ಹಾಗೂ ಅಭ್ಯರ್ಥಿಗಳು ಗದಗ ಜಿಲ್ಲೆಯವರಾಗಿರಬೇಕು. ಕಾನೂನು ತರಬೇತಿ ಪಡೆಯುವ ಅಭ್ಯರ್ಥಿಯು ಅಲ್ಪಸಂಖ್ಯಾತರ ಸಮುದಾಯದವರಾಗಿರಬೇಕು. ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.3.50 ಲಕ್ಷ ಒಳಗಿರಬೇಕು. ತರಬೇತಿ ಅವಧಿ 4 ವರ್ಷಗಳಾಗಿದ್ದು, ಆಯ್ಕೆಗೊಂಡ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ರೂ. 5000 ಮಾಹೆಯಂತೆ ತರಬೇತಿ ಭತ್ಯೆ ನೀಡಲಾಗುವುದು.

ಅಭ್ಯರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆ ಸಮಿತಿಯಿಂದ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು. ಅಭ್ಯರ್ಥಿಗಳು ಅರ್ಜಿಯ ಜೊತೆಗೆ ಅವರ ವಯಸ್ಸನ್ನು ಧೃಡೀಕರಿಸುವ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ಪ್ರಮಾಣ ಪತ್ರ, ಪದವಿ ಹಾಗೂ ಕಾನೂನು ಪದವಿಯಲ್ಲಿ ಪಡೆದ ಅಂಕಪಟ್ಟಿ ಪ್ರಮಾಣ ಪತ್ರದ ಧೃಡೀಕರಣ ಪ್ರತಿಗಳನ್ನು ಲಗತ್ತಿಸಬೇಕು. ಅಭ್ಯರ್ಥಿಯ ವಯಸ್ಸು ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕಕ್ಕೆ 30 ವರ್ಷಗಳಿಗೆ ಮೀರಿರಬಾರದು. ಅಭ್ಯರ್ಥಿಯು ಬಾರ ಕೌನ್ಸಿಲನಲ್ಲಿ ತಮ್ಮ ಹೆಸರನ್ನು ನೋಂದಾಯಿಸರಬೇಕು ಹಾಗೂ ತರಬೇತಿಗೆ ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಹಿಂದೆ 2 ವರ್ಷಗಳೊಳಗಾಗಿ ಕಾನೂನು ಪದವಿಯಲ್ಲಿ ಉತ್ತೀರ್ಣರಾಗಿರಬೇಕು.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕಚೇರಿ, ಜಿಲ್ಲಾ ನ್ಯಾಯಾಲಯದ ಎದುರುಗಡೆ, ಹುಬ್ಬಳ್ಳಿ ರಸ್ತೆ ಗದಗ ಇಲ್ಲಿ ಸಂಪರ್ಕಿಸಬಹುದಾಗಿದೆ.

## ಕನ್ನಡ ಜಾತ್ರೆಯ ಪೂರ್ವಸಿದ್ಧತೆ ಪರಿಶೀಲಿಸಿದ ಸಚಿವ ಪಾಟೀಲ

▶▶ ಮೊದಲನೇ ಪುಟದಿಂದ



ಸಂದರ್ಭದಲ್ಲಿ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ನಗರಸಭೆ ಪೌರಾಯುಕ್ತ ಗಂಗಪ್ಪ. ಎಂ., ಸಹಾಯಕ ಕಾರ್ಯಪಾಲಕ ಅಭಿಯಂತರ ಹುಚ್ಚೇಶ್ವರ ಬಂಡಿವಡ್ಡರ, ನಿರ್ಮಿತಿ ಕೇಂದ್ರದ ವ್ಯವಸ್ಥಾಪಕ ಗಂಗಾಧರ ಶಿರೋಳ, ಗಣ್ಯರಾದ ವಾಸಣ್ಣ ಕುರಡಗಿ, ಸಿದ್ದು ಪಾಟೀಲ, ಬಿ.ಬಿ.ಅಸೂಟಿ, ಪ್ರಭು ಬುರಬುರೆ, ಅಶೋಕ ಮಂದಾಲಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

## ವಕಾರಸಾಲ ವಿಷಯಕ್ಕೆ ರಣಾಂಗಣವಾದ ಸಾಮಾನ್ಯಸಭೆ

▶▶ ಮೊದಲನೇ ಪುಟದಿಂದ

ಲೀಸ್ ವಿಷಯ ಪ್ರಸ್ತಾಪವಾದರೆ ವಿರೋಧ ವ್ಯಕ್ತಪಡಿಸಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲರ ಆದೇಶ ಹಿನ್ನೆಲೆಯಲ್ಲಿ ಗದಗ-ಬೆಟಗೇರಿ ಶಹರ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಬಿ.ಬಿ ಅಸೂಟಿ ನಗರಸಭೆಯ ಕಾಂಗ್ರೆಸ್ ಸದಸ್ಯರಿಗೆ ನೋಟಿಸ್ ಹೊರಡಿಸಿದ್ದು, ನೋಟಿಸ್ ವಿರುದ್ಧ ನಡೆದುಕೊಂಡರೆ ಕಠಿಣ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ನೀಡಲಾಗಿತ್ತು.

ನಗರಸಭೆ ಆಸ್ತಿ ಲೀಸ್ ವಿಷಯದಲ್ಲಿ ಕಾಂಗ್ರೆಸ್ ಕಠಿಣ ನಿರ್ಧಾರ ತಳೆದಿದ್ದು, ಯಾವುದೇ ಕಾರಣಕ್ಕೂ ಸರ್ಕಾರಿ ಆಸ್ತಿಯನ್ನು ಉಳಿಸಿಕೊಳ್ಳುವಂತೆ ಒತ್ತಾಯಿಸಿತ್ತು. ಪ್ರತಿಭಟನೆಯಲ್ಲಿ ವಿವಿಧ ಸಂಘಟನೆಗಳ ಪ್ರಮುಖರಾದ ಚಂದ್ರಕಾಂತ್ ಚವ್ಹಾಣ್, ಶರಣು ಗೋಡಿ, ಭಾಷಾಸಾಬ ಮಲ್ಲಸಮುದ್ರ, ವಿಜಯ್ ಕಲ್ಮನಿ, ಗಣೇಶ ಹುಬ್ಬಳ್ಳಿ ರಾಘವೇಂದ್ರ ಪರಾಪುರ, ಮಂಜುನಾಥ ಪರ್ವತಗೌಡ್ರ, ರಾಘು ಪೂಜಾರ್, ರಫೀಕ ತೋರಗಲ್, ಬಸವರಾಜ್ ಮಾದುಗುಂಡಿ ಮುಂತಾದವರು ನೇತೃತ್ವ ವಹಿಸಿದ್ದರು.

### ಸಿಡಿದೆದ್ದ ನಾರೀಮಣಿಯರು

ನಗರಸಭೆಯ ಸಾಮಾನ್ಯ ಸಭೆ ರಣಾಂಗಣವಾಗಿತ್ತು. ಅಧ್ಯಕ್ಷೆ-ಮಹಿಳಾ ಸದಸ್ಯರ ನಡುವೆ ಮಾತಿನ ಚಕಮಕಿ ಮುಗಿಲುಮುಟ್ಟಿತ್ತು. ದಲಿತ ಮಹಿಳೆ ನಗರಸಭಾಧ್ಯಕ್ಷೆ ಆಗಿರುವುದರಿಂದಲೇ ಇಷ್ಟೊಂದು ವಿರೋಧ, ದೌರ್ಜನ್ಯ ನಡೆಯುತ್ತಿದೆ ಎಂದ ಅಧ್ಯಕ್ಷೆ ಉಷಾ ದಾಸರ ಮಾತಿಗೆ ತಿರುಗೇಟು ನೀಡಿದ ಕಾಂಗ್ರೆಸ್ ಸದಸ್ಯೆ ಪದ್ಮಾ ಕಟಗಿ, ನಾವೂ ಕೂಡ ದಲಿತ ಸದಸ್ಯರೇ ಎಂದರು. ರೊಚ್ಚಿಗೆದ್ದ ಸದಸ್ಯರು ಫೈಲ್‌ಗಳನ್ನು ಎಸೆದು ಆಕ್ರೋಶ ಹೊರಹಾಕಿದರು. ಕಾಂಗ್ರೆಸ್ ಸದಸ್ಯರ ಕಾಮಗಾರಿ ಫೈಲ್‌ಗಳಿಗೆ ಅಧ್ಯಕ್ಷರು ಸಹಿ ಹಾಕುತ್ತಿಲ್ಲ ಎಂದು ಕಾಂಗ್ರೆಸ್ ಮಹಿಳಾ ಸದಸ್ಯರು ಆರೋಪಿಸಿದರು. ಸದಸನದ ಬಾವಿಗಿಳಿದು ಕಾಂಗ್ರೆಸ್ ಮಹಿಳಾ ಸದಸ್ಯರ ಪ್ರತಿಭಟನೆ ನಡೆಸಿದರು. ಈ ನಡುವೆ, ಕಾಂಗ್ರೆಸ್ ಮಹಿಳಾ ಸದಸ್ಯರಿಗೆ ಅನ್ಯಾಯವಾಗುತ್ತಿದೆ ಎಂದು ಕೃಷ್ಣಾ ಪರಾಪೂರ ಆಕ್ರೋಶ ವ್ಯಕ್ತಪಡಿಸಿದಾಗ, ಅಧ್ಯಕ್ಷೆ ಉಷಾ ದಾಸರ, ಸದಸ್ಯ ಕೃಷ್ಣಾ ಪರಾಪೂರ ನಡುವೆ ತೀವ್ರ ವಾಗ್ವಾದವೇ ನಡೆಯಿತು.

## ವಿವಿಧ ಬೇಡಿಕೆಗಳ ಈಡೇರಿಕೆಗೆ ರೈತ ಸಂಘದಿಂದ ಮನವಿ



■ ವಿಜಯಸಾಕ್ಷಿ ಸುದ್ದಿ, ನರಗುಂದ

ಬರಗಾಲದ ಪರಿಹಾರವನ್ನು ಎಕರೆಗೆ 25 ಸಾವಿರ, ಜಾನುವಾರುಗಳಿಗೆ ಮೇವಿನ ವ್ಯವಸ್ಥೆ ಹಾಗೂ ಕೃಷಿಗಾಗಿ ರೈತರ ಪಂಪಸೆಟ್‌ಗಳಿಗೆ ದಿನಕ್ಕೆ 10 ಗಂಟೆ ವಿದ್ಯುತ್ ಒದಗಿಸಬೇಕೆಂದು ಭಾರತೀಯ ಕಿಸಾನ ಸಂಘದ ತಾಲೂಕಾಧ್ಯಕ್ಷ ಸಂಗನಗೌಡ ಪಾಟೀಲ ಸರಕಾರವನ್ನು ಆಗ್ರಹಿಸಿದರು.

ಸೋಮವಾರ ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ತಹಸೀಲ್ದಾರ ಶ್ರೀಶೈಲ ತಳವಾರ ಅವರಿಗೆ ಮನವಿ ಅರ್ಪಿಸಿ ಮಾತನಾಡಿದ ಅವರು, ಕೃಷಿ ಹಾಗೂ ಕಂದಾಯ ಇಲಾಖೆಯಲ್ಲಿ ಫಸಲ್ ಭೀಮಾ ಯೋಜನೆ ಬಗ್ಗೆ ಸರಿಯಾದ ಮಾಹಿತಿ ದೊರೆಯದ ಕಾರಣ ಮಳೆ ಆಧಾರಿತ ಸರಳ ಸಮೀಕ್ಷೆಗೆ ಸಮಸ್ಯೆಯಾಗುತ್ತಿದೆ. ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕು ಎಂದರು.

ತಾಲೂಕಿನಲ್ಲಿರುವ ಹಳ್ಳ ಕೊಳ್ಳಗಳಿಗೆ ಪ್ರತಿ ಕಿಮೀಗೊಂದರಂತೆ ಬ್ರಿಡ್ಜ್ ಕಮ್ ಬ್ಯಾರೇಜ್ ನಿರ್ಮಿಸಿದರೆ ಅಂತರ್ಜಲ ಹೆಚ್ಚಳ ಆಗುತ್ತದೆ. ಇದರಿಂದ ಕೃಷಿ ಚಟುವಟಿಕೆಗಳಿಗೆ ತುಂಬಾ ಅನುಕೂಲವಾಗುತ್ತದೆ. ಮತ್ತು ಮುಂಗಾರು ಹಂಗಾಮಿನ ಹೆಸರು ಬೆಳೆಗಳಿಗೆ ಮಾತ್ರ ಬೆಳೆ ವಿಮೆಯನ್ನು ಹಾಕಲಾಗಿದೆ. ಇನ್ನುಳಿದ ಎಲ್ಲಾ ಬೆಳೆಗಳಿಗೂ ಬೆಳೆ ವಿಮೆ ಹಾಕಬೇಕೆಂದರು. ಕಳೆದ ಮೂರು ವರ್ಷಗಳಿಂದ ತಾಲೂಕಿನಲ್ಲಿ ಅತಿವೃಷ್ಟಿಯಾಗಿದೆ. ಈ ವರ್ಷ ಅನಾವೃಷ್ಟಿಯಿಂದ ರೈತ ಸಮುದಾಯ ನಲುಗಿ ಹೋಗಿದೆ. ಮುಂಗಾರು ಹೆಸರು ಬೆಳೆಗಳು ಸಂಪೂರ್ಣ ಹಾನಿಯಾಗಿದೆ. ಸಂಕಷ್ಟದಲ್ಲಿರುವ ರೈತರ ಎಲ್ಲ ಬ್ಯಾಂಕುಗಳಲ್ಲಿನ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕೆಂದು ರಾಜ್ಯ ಸರಕಾರವನ್ನು ಆಗ್ರಹ ಮಾಡಿದರು.

ಈ ಸಂದರ್ಭದಲ್ಲಿ ಸಂತೋಷ ಮುಧೋಳೆ, ವಿಠ್ಠಲ ಮುಧೋಳೆ, ಬಿ ಹೆಚ್ ಗಂಗೋಡಿ, ಎಮ್ ಬಿ ಯಲಿಗಾರ, ವ್ಹಿ ಎಸ್ ಹಲಗತ್ತಿ, ಶಿವಾನಂದ ತೆಗ್ಗಿನಮನಿ, ಬಸವರಾಜ ಕಿತ್ತೂರ, ಭೀಮಪ್ಪ ಹಾದಿಮನಿ, ಹನುಮಂತ ಮಲ್ಲಾಪೂರ ಸೇರಿದಂತೆ ಅನೇಕರಿದ್ದರು.

ಗಣಿತ ಪ್ರಯೋಗಾಲಯ, ಸಂಶೋಧನಾ ಕೇಂದ್ರಕ್ಕೆ ಭೇಟಿಯಿತ್ತ ಸಭಾಪತಿ ಬಸವರಾಜ ಹೊರಟ್ಟಿ

## ಕಲಿಕೆಯ ಪ್ರೀತಿ ಮೂಡಿಸಲು ಪ್ರಯೋಗಾಲಯ ಸಹಕಾರಿ



■ ವಿಜಯಸಾಕ್ಷಿ ಸುದ್ದಿ, ಗದಗ

ಹುಬ್ಬಳ್ಳಿಯ ಅವ್ವ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಸದಸ್ಯರಾದ ಹೇಮಲತಾ ಬಸವರಾಜ ಹೊರಟ್ಟಿಯವರ ಸಹಕಾರದಿಂದ ಪಟ್ಟಣದ ಸಿದ್ಧಲಿಂಗ ನಗರದಲ್ಲಿನ ಸರಕಾರಿ ಪ್ರೌಢಶಾಲೆಯಲ್ಲಿ ನಿರ್ಮಾಣಗೊಂಡಿರುವ ಗಣಿತ ಪ್ರಯೋಗಾಲಯ ಮತ್ತು ಸಂಶೋಧನಾ ಕೇಂದ್ರ ಅಮೂಲ್ಯ ಮಾದರಿಗಳನ್ನು ಹೊಂದಿದೆ. ಇವುಗಳ ಮೂಲಕ ಗಣಿತದ ಸರಳ ಕಲಿಕೆಗೆ ಹಾಗೂ ಸಂಶೋಧನೆಗೆ ವಿದ್ಯಾರ್ಥಿಗಳಿಗೆ ಸಹಕಾರಿಯಾಗುತ್ತದೆ. ಇದರ ಉಪಯೋಗವನ್ನು ವಿದ್ಯಾರ್ಥಿಗಳು ಹೆಚ್ಚೆಚ್ಚು ಪಡೆಯುವಂತಾಗಲಿ ಎಂದು ವಿ.ಪ ಸಭಾಪತಿ ಬಸವರಾಜ ಹೊರಟ್ಟಿ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಅವರು ಪಟ್ಟಣದ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯಲ್ಲಿ ಗಣಿತ ಪ್ರಯೋಗಾಲಯ ಮತ್ತು ಸಂಶೋಧನಾ ಕೇಂದ್ರಕ್ಕೆ ಭೇಟಿ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳಿಗೆ ಗಣಿತ ಕಲಿಕೆಯೆಂದರೆ ಬಹಳಷ್ಟು ಕಠಿಣವೆನಿಸಿದೆ. ಇಲ್ಲಿನ ಗಣಿತದ ಮಾದರಿಗಳನ್ನು ಕಂಡಾಗ ಗಣಿತ ಕಲಿಕೆ ಸುಲಭವಾಗಬಹುದೆಂಬ ಆಶಯ ವ್ಯಕ್ತವಾಗುತ್ತದೆ. ವಿದ್ಯಾರ್ಥಿಗಳು ಈ ಪ್ರಯೋಗಾಲಯದಲ್ಲಿ ಸ್ವತಃ ತಾವೇ ಮಾಡಿ ನೋಡುವ, ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುವ, ಮಾಡಿ ಕಲಿ-ನೋಡಿ ತಿಳಿ ಎಂಬ ಆಶಯವನ್ನು ಸಾರ್ಥಕಪಡಿಸಿಕೊಳ್ಳಲು ಸಹಾಯಕವಾಗಿವೆ. ಶಿಕ್ಷಕರು ಈ ಪ್ರಯೋಗಾಲಯದ ಮಹತ್ವದ ಸಂಗತಿಗಳನ್ನು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಕೊಟ್ಟು, ಅವರು ಗಣಿತವನ್ನು ಕಲಿಯಲಷ್ಟೇ ಅಲ್ಲ, ತಮ್ಮ ಮನದೊಳಕ್ಕೆ ಅದನ್ನು ಆಹ್ವಾನಿಸಿಕೊಂಡು ಅಧ್ಯಯನ ಮಾಡುವ ರೀತಿಯಲ್ಲಿ ಮಕ್ಕಳಿಗೆ ಉತ್ತೇಜನ ಮತ್ತು ಪ್ರೋತ್ಸಾಹ ನೀಡಬೇಕೆಂದು ಸಭಾಪತಿ ಹೊರಟ್ಟಿ ಹೇಳಿದರು.

ಇಂತಹ ಸುಸಜ್ಜಿತವಾದ ಗಣಿತ ಪ್ರಯೋಗಾಲಯ ಮತ್ತು ಸಂಶೋಧನಾ ಕೇಂದ್ರವು ಈ ಶಾಲೆಯಲ್ಲಿ ಸ್ಥಾಪನೆಯಾಗಿರುವುದು ಅತೀವ ಸಂತಸ ತಂದಿದೆ. ಇದಕ್ಕೆ ಕೈ ಜೋಡಿಸಿದ ನನ್ನ ಶ್ರೀಮತಿ ಹೇಮಲತಾ ಅವರ ಶ್ರಮ ಮತ್ತು ಚಾಲನೆ ನೀಡಿ ಸಕಲ ವ್ಯವಸ್ಥೆಯನ್ನು ಮಾಡಿದ ಅವ್ವ ಸೇವಾ ಟ್ರಸ್ಟ್‌ನ ಸಂಚಾಲಕ ಡಾ. ಬಸವರಾಜ ಧಾರವಾಡ ಅವರ ಶ್ರಮ, ಆಸಕ್ತಿ ಎಲ್ಲವೂ ಸಾರ್ಥಕವೆನ್ನಿಸಿದೆ. ಇಂತದೊಂದು ಶ್ರೇಷ್ಠ ಮಟ್ಟದ ಗಣಿತ ಪ್ರಯೋಗಾಲಯ ಮತ್ತು ಸಂಶೋಧನಾ ಕೇಂದ್ರವನ್ನು ನಿರ್ಮಿಸಿ, ಮಕ್ಕಳ ಕಲಿಕಾ ಆಸಕ್ತಿಯನ್ನು ಕೆರಳಿಸಿ, ಅವರು ಓರ್ವ ಶ್ರೇಷ್ಠ ಗಣಿತಜ್ಞರಾಗುವಂತೆ ಮಾಡುವಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವ ಎಲ್ಲರನ್ನೂ ತಾವು ಹೃತ್ಪೂರ್ವಕವಾಗಿ ಅಭಿನಂದಿಸುವುದಾಗಿ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಈ ಸಂದರ್ಭದಲ್ಲಿ ಡಾ. ಬಸವರಾಜ ಧಾರವಾಡ, ಸಾ.ಶಿ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ವಿರುಪಾಕ್ಷಪ್ಪ ನಡುವಿನಮನಿ, ನಗರಸಭಾ ಸದಸ್ಯೆ ವಿದ್ಯಾವತಿ ಗಡಗಿ, ಎಸ್.ಎಂ ಅಗಡಿ, ಮುಖ್ಯೋಪಾಧ್ಯಾಯೆ ಪಾರ್ವತಿ ವಸ್ತ್ರದ, ವಿಜಯಲಕ್ಷ್ಮಿ ಅಣ್ಣಿಗೇರಿ, ಎಸ್.ಆರ್ ಹನುಮಗೌಡರ, ಎಸ್.ಜಿ ಕಲಗುಡಿ, ಎಮ್.ಐ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್. ವೈ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವಿ ದಾಸರ, ಎಲ್.ಎಸ್ ಮಾಳೋತ್ತರ ಮುಂತಾವದರು ಉಪಸ್ಥಿತರಿದ್ದರು.

> ಕೆಲವಷ್ಟು ಚಟುವಟಿಕೆಗಳನ್ನು ಸ್ವತಃ ತಾವೇ ಮಾಡಿ ನೋಡುವ ಮೂಲಕ ಆನಂದಪಟ್ಟ ಸಭಾಪತಿ ಹೊರಟ್ಟಿಯವರು, ಈ ಚಟುವಟಿಕೆಗಳನ್ನು ಗಮನಿಸಿದಾಗ ಗಣಿತ ಕಲಿಕೆ ಇಷ್ಟೊಂದು ಸುಲಭ ಎಂದು ನನಗೆ ಅನ್ನಿಸಿರಲೇ ಇಲ್ಲ. ಇಂತಹ ಚಟುವಟಿಕೆಗಳು ನಿಜಕ್ಕೂ ವಿದ್ಯಾರ್ಥಿಗಳ ಮನದಲ್ಲಿ ಗಣಿತ ಕಲಿಕೆಯ ಪ್ರೀತಿಯನ್ನು ಹುಟ್ಟಿಸುವಲ್ಲಿ ಸಹಾಯಕವಾಗುತ್ತವೆ. ನಾವು ಶಾಲೆ ಕಲಿಯುವ ದಿನಗಳಲ್ಲಿ ಕೇವಲ ವಿಜ್ಞಾನ ಪ್ರಯೋಗಾಲಯಗಳನ್ನು ಮಾತ್ರ ಕಂಡು ಕೇಳಿದ್ದೆವು. ಕಾಲೇಜು ಮಟ್ಟಕ್ಕೆ ಬಂದಾಗ ಭೌತಶಾಸ್ತ್ರ, ರಾಸಾಯನ ಶಾಸ್ತ್ರ ಮತ್ತು ಜೀವಶಾಸ್ತ್ರ ಎಂಬ ಪ್ರಯೋಗಾಲಯಗಳನ್ನು ನೋಡಿದ್ದೆವು. ಆದರೆ ಗಣಿತಕ್ಕೂ ಒಂದು ಪ್ರಯೋಗಾಲಯ ಮಾಡಬಹುದೆಂಬ ಕಲ್ಪನೆ ಅದ್ಭುತವಾದುದು. ಇದು ಇಲ್ಲಿನ ಎಲ್ಲ ಮಕ್ಕಳಿಗೆ ಅನುಕೂಲವಾಗಲಿ ಎಂದು ಹೊರಟ್ಟಿ ಹೇಳಿದರು.

## 2ಎ ಮೀಸಲಾತಿ ಸಿಗುವವರೆಗೂ ಹೋರಾಟ ನಿಲ್ಲದು

▶▶ ಮೊದಲನೇ ಪುಟದಿಂದ

ಸಂಘಟಕರು ಇದಕ್ಕೆ ಒಪ್ಪದೆ, ಶ್ರೀಗಳ ಮನವೊಲಿಸಿ ರಸ್ತೆ ಪಕ್ಕದಲ್ಲಿ ಪೂಜೆ ನೆರವೇರಿಸಲು ವ್ಯವಸ್ಥೆ ಕಲ್ಪಿಸಿದರು. ಪಂಚಮಸಾಲಿ ಸಮುದಾಯದ ಸಹಸ್ರಾರು ಜನ ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸಿದ್ದರಿಂದ ಸಂಚಾರ ಸಮಸ್ಯೆ ಎದುರಾಗುವಂತಾಗಿತ್ತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ಅನಿಲ್ ಪಾಟೀಲ, ಯುವ ಘಟಕಾಧ್ಯಕ್ಷ ಅಯ್ಯಪ್ಪ ಅಂಗಡಿ, ಸಿದ್ದು ಪಲ್ಲೇದ, ಶಿವರಾಜಗೌಡ ಹಿರೇಮನಿಪಾಟೀಲ, ವಸಂತ ಪಡಗದ, ಎಸ್.ವಿ ಪಾಟೀಲ, ಸಿದ್ಧಣ್ಣ ಬಂಡಿ, ವಿಶ್ವನಾಥ ಜಿಡ್ಡಿಬಾಗಿಲ, ಕೊಟ್ರಗೌಡ ಪಾಟೀಲ, ಸಿದ್ದು ದೇಸಾಯಿ, ಸ್ವಾತಿ ಅಕ್ಕಿ ಸೇರಿದಂತೆ ವಿವಿಧ ತಾಲೂಕು ಘಟಕಗಳ ಪದಾಕಾರಿಗಳು, ಸದಸ್ಯರು, ಸಮಾಜದ ಹಿರಿಯರು ಉಪಸ್ಥಿತರಿದ್ದರು

> ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವ ಎಚ್.ಕೆ ಪಾಟೀಲ, ಶ್ರೀಗಳು ಮೀಸಲಾತಿಗಾಗಿ ರಸ್ತೆಯಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸುವುದು ನನಗೆ ಸರಿಯೆನಿಸುತ್ತಿಲ್ಲ. ಹೆದ್ದಾರಿಯಲ್ಲಿ ಇಷ್ಟಲಿಂಗ ಪೂಜೆ ನೆರವೇರಿಸುವ ಕಾರಣದ ಕುರಿತು ನನ್ನ ಗಮನಕ್ಕೆ ಬಂದಿದೆ. ಈ ವಿಷಯವನ್ನು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಮುಂದಿನ ನಿರ್ಣಯ ತೆಗೆದುಕೊಳ್ಳುವುದಾಗಿ ಸಚಿವರು ಭರವಸೆ ನೀಡಿದರು.



ಮುಳಗುಂದ ಪಟ್ಟಣದ ಕೋಟಿ ಓಣಿ ಹಾಗೂ ಚಿಂದಿಪೇಟಿ ಓಣಿಯ ಅಪ್ಪು ಅಭಿಮಾನಿಗಳಿಂದ ಪುನೀತ್ ರಾಜ್‌ಕುಮಾರರ 2ನೇ ವರ್ಷದ ಪುಣ್ಯಸ್ಮರಣೆ ನಿಮಿತ್ತ ಅಪ್ಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕೃಷ್ಣಾ ನವಲೆ, ಮಣಿಕಂಠ ಕಬಾಡೆ, ಸಂತೋಷ ಮಟ್ಟಿ, ರಮೇಶ ಮಜ್ಜಿಗುಡ್ಡ, ಮಂಜುನಾಥ ಪಪ್ಪಳೆ, ವಿಜಯ ನವಲೆ, ಮಾಹಾಂತೇಶ ನವಲೆ, ಉಮೇಶ ಮಾಂಡ್ರೆ, ಪ್ರಜ್ವಲ್ ಯಲುವಿಗಿ, ವಿರೇಶ ಹಿರೇಮಠ ಮಹೇಶ ಛಬ್ಬಿ, ರಾಘವೇಂದ್ರ ಮಾಂಡ್ರೆ ಇದ್ದರು.



ಗದಗ ನಗರದ ವಿದ್ಯಾದಾನ ಸಮಿತಿ ಕ್ಲಾಸಿಕ್ ಆಂಗ್ಲ ಮಾಧ್ಯಮ ಶಾಲೆಯ ಶಿಕ್ಷಕಿಯರು ಗದಗ ನಗರದ ವಾರ್ಡ್ ಸಂಖ್ಯೆ 14ರಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪತ್ತೆ ಹಚ್ಚಲು ಸರ್ವೆ ಕಾರ್ಯ ಕೈಗೊಂಡರು.

### ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಪುಣ್ಯಾರಾಧನೆ, ಧರ್ಮಜಾಗೃತಿ ಸಮಾರಂಭ ಇಂದು

# ಸರ್ವಧರ್ಮ ಸಮನ್ವಯತೆಗೆ ಸಾಕ್ಷಿಯಾದ ಮುಕ್ತಿಮಂದಿರ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಭೂ ಕೈಲಾಸ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ಅ.31ರಂದು ಲಿಂ. ಶ್ರೀ ರಂಭಾಪುರಿ ವೀರಗಂಗಾಧರ ಜಗದ್ಗುರುಗಳ 41ನೇ ಪುಣ್ಯಾರಾಧನೆ ಮಹೋತ್ಸವ ಮತ್ತು ಧರ್ಮಜಾಗೃತಿ ಸಮಾರಂಭ, ಮಧ್ಯಾಹ್ನ 1ಕ್ಕೆ ವೀರಗಂಗಾಧರ ಶಿವಾಚಾರ್ಯರ ಮಹಾಮೂರ್ತಿಯ ಅಡ್ಡಪಲ್ಲಕ್ಕಿ ಮಹೋತ್ಸವ, ಮಧ್ಯಾಹ್ನ 3ಕ್ಕೆ ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ಧರ್ಮಸಭೆ ಜರುಗಲಿದೆ.

ಮುಕ್ತಿಮಂದಿರ ಶ್ರೀಮಠದ ಪಟ್ಟಾಧ್ಯಕ್ಷರಾದ ವಿಮಲರೇಣುಕ ವೀರಮುಕ್ತಿಮುನಿ ಶಿವಾಚಾರ್ಯ ಮಹಾಸ್ವಾಮಿಗಳು ನೇತೃತ್ವ ಮತ್ತು ನೊಣವಿನಕೆರೆ ಕಾಡಸಿದ್ದೇಶ್ವರಮಠದ ಡಾ. ಕರಿಬಸವ ರಾಜೇಂದ್ರ ಮಹಾಸ್ವಾಮಿಗಳು ಅಧ್ಯಕ್ಷತೆ ವಹಿಸುವರು. ಧರ್ಮಸಭೆಯಲ್ಲಿ ಬಂಕಾಪೂರ, ಮಳಲಿಮಠ, ಸುಳ್ಳ, ಎಮ್ಮಿಗನೂರ, ಹೊಸಪೇಟೆ, ಲಕ್ಷ್ಮೇಶ್ವರ, ಕಲಾದಗಿ, ಮಳಲಿ, ಚಳಗೇರಿ, ಸಿದ್ಧರಬೆಟ್ಟ, ಕಣ್ವಕುಪ್ಪೆ, ಬನ್ನಿಕೊಪ್ಪ, ಬಿಲ್‌ಕೆರೂರ, ಗಿರಿಸಾಗರ ಶ್ರೀಗಳು ಸೇರಿ ಅನೇಕ ಹರಗುರುಚರ ಮೂರ್ತಿಗಳು ಉಪಸ್ಥಿತರಿರುವರು.

ಸಚಿವ ಎಚ್.ಕೆ ಪಾಟೀಲ ಉದ್ಘಾಟಿಸುವರು. ಅತಿಥಿಗಳಾಗಿ ಸಂಸದ ಶಿವಕುಮಾರ ಉದಾಸಿ, ಶಾಸಕರಾದ ಡಾ.ಚಂದ್ರು ಲಮಾಣಿ, ಎಂ.ಆರ್ ಪಾಟೀಲ, ಎಸ್.ವಿ ಸಂಕನೂರ ಸೇರಿ ಮಾಜಿ ಸಂಸದರು, ಶಾಸಕರು, ಗಣ್ಯಮಾನ್ಯರು, ಭಕ್ತ ಸಮೂಹ ಪಾಲ್ಗೊಳ್ಳಲಿದೆ.



ನಿಂದಕರು ನಿತ್ಯ ಸುಖದಾಯಕರು, ಭಕ್ತಿಯೋಗ, ಗುರುವಂಶ ಜಾಗೃತಿ, ಗೋರಕ್ಷ ಗರ್ವ ಹರಣ, ವೀರಶೈವ ಧರ್ಮ ಸುಧಾರಣೆ, ಗುರು ಕೀರ್ತನೆ, ಸುಧಾ ಸಾರ, ಶಿವ ಪೂಜಾ ವಿಧಾನ ಮತ್ತು ಸ್ತೋತ್ರ, ವಿಭೂತಿ ಮತ್ತು ತ್ರಿದಳ ಇವರು ಬರೆ ಪುಸ್ತಕಗಳಾಗಿವೆ. 'ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ' ಎಂಬ ವಿಶ್ವಮಾನ್ಯ, ಸಾರ್ವಕಾಲಿಕ ಸಂದೇಶ ಇವರ ಹೃದಯ ಶ್ರೀಮಂತಿಕೆಗೆ ಸಾಕ್ಷಿಯಾಗಿದೆ. ಇವರ ತ್ರೀಕೋಟಿ ಲಿಂಗ ಸ್ಥಾಪನೆ ಕನಸು ನನಸಾಗುವ ಕಾಲ ಕೂಡಿ ಬಂದಿದೆ. ಪಟ್ಟಾಧ್ಯಕ್ಷರಾದ ಶ್ರೀ ವಿಮಲರೇಣುಕ ವೀರ ಮುಕ್ತಿ ಮುನಿ ಶಿವಾಚಾರ್ಯರ ಇಚ್ಛಾಶಕ್ತಿಯಿಂದ ಈಗಾಗಲೇ ಕೋಟಿ ಕೋಟಿ ಶಿವಲಿಂಗಗಳು ಶ್ರೀ ಮುಕ್ತಿಮಂದಿರ ಧರ್ಮಕ್ಷೇತ್ರದಲ್ಲಿ ರಾರಾಜಿಸುತ್ತಿವೆ ಮತ್ತು ಪ್ರತಿಷ್ಠಾಪನಾ ಕಾರ್ಯವೂ ಭರದಿಂದ ಸಾಗಿದೆ.

**ಶ್ರೀ ವೀರಗಂಗಾಧರ ಜಗದ್ಗುರುಗಳ ಬಾಲ್ಯ:** ಹುಬ್ಬಳ್ಳಿ ತಾಲೂಕಿನ ಪಾಲಿಕೊಪ್ಪ ಗ್ರಾಮದ ಹಿರೇಮಠ ಮನೆತನದಲ್ಲಿ ಲಿಂ. ಶ್ರೀ ವೀರಗಂಗಾಧರ ಜಗದ್ಗುರು 1903ರ ಏ.8ರಂದು ಜನಿಸಿದರು. ಪಾಲಿಕೊಪ್ಪ, ಕಮತಗಿಯಲ್ಲಿ ವಿದ್ಯಾಭ್ಯಾಸ ಮುಗಿಸಿ ಬಳಿಕ ಸೊಲ್ಲಾಪುರದ ವಾರದ ಅವರ ಪಾಠಶಾಲೆಯಲ್ಲಿ ಹಿಂದಿ, ಮರಾಠಿ, ಸಂಸ್ಕೃತ ಅಧ್ಯಯನ ಮಾಡಿದರು. 23ನೇ ವಯಸ್ಸಿಗೆ ಪಾಲಿಕೊಪ್ಪದ ಹಿರೇಮಠಕ್ಕೆ ಪಟ್ಟಾಧ್ಯಕ್ಷರಾದರು. 1932ರಲ್ಲಿ ಬೆಂಗಳೂರು ನಗರದ ಮಹಂತಿನ ಮಠಕ್ಕೆ ಮತ್ತು ವಿಭೂತಿಪುರ ಮಠದ ಪಟ್ಟಾಧಿಕಾರ ವಹಿಸಿಕೊಂಡು ಅಭಿವೃದ್ಧಿಪಡಿಸಿದರು.

**ಮುಕ್ತಿಮಂದಿರ ಸ್ಥಾಪನೆ:** ಶಿಗ್ಗಾವಿ ತಾಲೂಕಿನ ಸುಕ್ಷೇತ್ರ ಗಂಗಿಭಾವಿ, ಬಂಕಾಪುರ, ಎರೇಬೂದಿಹಾಳ, ಹರ್ಲಾಪುರ, ಸುಲ್ತಾನಪುರ, ಲಕ್ಷ್ಮೇಶ್ವರ ಹೀಗೆ ಅನೇಕ ಊರುಗಳಲ್ಲಿ ಧರ್ಮದ ಬೀಜ ಬಿತ್ತಿದರು. 1936ರಲ್ಲಿ ಹರಲಾಪುರ ಗ್ರಾಮದ ಕೆಂಚಪ್ಪ ಬಂಡಿವಾಡ ಮತ್ತು ಕಲ್ಲಪ್ಪ ಕೊರಡೂರ ಇವರುಗಳು 18 ಎಕರೆ ಭೂಮಿಯನ್ನು ದಾನವಾಗಿ ಅರ್ಪಿಸಿದರು. ಸಿದ್ದಯ್ಯನ ಅಡವಿಯೆಂದು ಕರೆಸಿಕೊಳ್ಳುವ ಈಗಿರುವ ಮುಕ್ತಿಮಂದಿರ ಜಾಗದಲ್ಲಿ 1937ರಂದು ಶ್ರೀ ವೀರಗಂಗಾಧರ ಮಹಾಸ್ವಾಮಿಗಳು 'ಮುಕ್ತಿಮಂದಿರ' ಎಂಬ ಹೆಸರಿನಿಂದ ಮಠವನ್ನು ಸ್ಥಾಪಿಸಿದರು.



**ಕಾಯಕ ತತ್ವ:** ಶ್ರೀಗಳೇ ಸ್ವತಃ ಗುದ್ದಲಿ ಹಿಡಿದು ಭಕ್ತ ಸಮೂಹದೊಂದಿಗೆ 'ಸೋಮಸಾಗರ' ಕೆರೆ ನಿರ್ಮಿಸಿ ಅಲ್ಲಿಂದ ತಾವೇ ಸ್ವತಃ ನೀರನ್ನ ತಂದು ಪತ್ರಿವನ ಮತ್ತು ಅನೇಕ ಗಿಡ-ಮರ, ಹೂವುಗಳನ್ನು ಬೆಳೆಸಿದರು. ತಾವೇ ಬಿಸಿದ ಜೋಳದ ನುಚ್ಚಿನಿಂದ ಅಂಬಲಿ ಪ್ರಸಾದವನ್ನು ಮಾಡಿ ಭಕ್ತರಿಗೆ ಉಣಬಡಿಸುವ ಮೂಲಕ ಅನ್ನದಾಸೋಹ ಕೈಗೊಂಡರು. ಕೃಷಿ ಇವರ ದಿನನಿತ್ಯದ ಕಾಯಕವಾಗಿತ್ತು.

ಗಂಗಾಧರ ಜಗದ್ಗುರುಗಳ ಕೊರಳಲ್ಲಿ ರುದ್ರಾಕ್ಷಿ ಮಾಲೆ, ತಲೆಯ ಮೇಲೆ ಮಣಿ ಮುಕುಟ, ಸದಾಕಾಲ ಹಣೆಯ ಮೇಲೆ ವಿಭುತಿ, ತಟ್ಟಿನ ಹೊದಿಕೆ, ಎಡಗೈಯಲ್ಲಿ ಯೋಗದಂಡ, ಬಲಗೈಯಲ್ಲಿ ಕಮಂಡಲ, ಹೆಗಲ ಮೇಲೆ ಕಂಬಳಿ ಹೊದ್ದು ಕೊರಳಿಗೆ ಮಡಿಕೆಯನ್ನು ಕಟ್ಟಿಕೊಂಡು, ಬಿಲ್ಪತ್ರೆ ಮಾಲೆಯನ್ನು ಧರಿಸಿ ಸ್ಮಶಾನ ಕಾಯುವ ಪರಶಿವನ ಹಾಗೆ ಕಾಣುತ್ತಿದ್ದರು.

**ರಂಭಾಪುರಿ ಪೀಠಕ್ಕೆ ಪಟ್ಟಾಧಿಕಾರ:** ಜಗದ್ಗುರುಗಳ ತಪಃಶಕ್ತಿ ಕಂಡು ರಂಭಾಪುರಿ ಪೀಠದ ಶ್ರೀ ಶಿವಾನಂದ ಜಗದ್ಗುರುಗಳವರು 1947ರ ಮೇ 8 ರಂದು ರಂಭಾಪುರಿ ಪೀಠಕ್ಕೆ ಪಟ್ಟಾಧಿಕಾರ ನೀಡಿದರು. ಪಂಚಾಚಾರ್ಯರ ಅಡ್ಡಪಲ್ಲಕ್ಕಿಯನ್ನು ಪ್ರಪ್ರಥಮವಾಗಿ ನೆರವೇರಿಸುವುದರ ಮೂಲಕ ಮುಕ್ತಿ ಮಂದಿರವನ್ನು ಧರ್ಮ ಕ್ಷೇತ್ರವನ್ನಾಗಿಸಿದರು, ಸರ್ವಧರ್ಮ ಸಮನ್ವಯಗೊಳಿಸಲು ಮುಕ್ತಿ ಮಂದಿರದಲ್ಲಿ ಸರ್ವ ಧರ್ಮೀಯರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು.

## ರಸ್ತೆಯ ಧೂಳಿಗೆ ಬೆಳೆಗಳ ಕಣ್ಣೀರು



**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಈ ವರ್ಷದ ರೈತರ ಪರಿಸ್ಥಿತಿ ತೀರಾ ಹದಗೆಟ್ಟಿದ್ದು, ಮುಂಗಾರು ಮಳೆಯಿಲ್ಲದೆ ಬೆಳೆಗಳೆಲ್ಲವೂ ಸಂಪೂರ್ಣ ನೆಲಕಚ್ಚಿದೆ. ಹಿಂಗಾರು ಮಳೆಯ ವಿಫಲತೆಯಿಂದ ರೈತರು ಮತ್ತಷ್ಟು ಕಂಗೆಟ್ಟಿದ್ದಾರೆ. ಅಲ್ಪಸ್ವಲ್ಪ ಜೀವ ಹಿಡಿದಿರುವ ಹತ್ತಿ, ಶೇಂಗಾ ಬೆಳೆಗಳನ್ನು ಉಳಿಸಿಕೊಳ್ಳಲು ಅದರಲ್ಲೂ ಪಾಳಾ-ಬದಾಮಿ ರಸ್ತೆಯ ಪಕ್ಕದ ಹೊಲಗಳ ರೈತರು ಹೋರಾಟಕ್ಕಿಳಿಯುವಂತಾಗಿದೆ.

ಲಕ್ಷ್ಮೇಶ್ವರ-ಗದಗ ಪ್ರಮುಖ ರಸ್ತೆ ಕೇವಲ ದುರಸ್ಥಿಯಲ್ಲಿಯೇ ದಿನಕಳೆದಂತಾಗಿದ್ದು, ಖಡಿ, ಎಂ ಸ್ಯಾಂಡ್ ಹಾಕಿ ರಸ್ತೆ ದುರಸ್ಥಿಗಾಗಿ ಹಾಗೆ ಬಿಟ್ಟು ಹಲವಾರು ತಿಂಗಳುಗಳೇ ಕಳೆದಿವೆ. ಇದರಿಂದ ಏಳುವ ಧೂಳಿನಿಂದ ರಸ್ತೆ ಅಕ್ಕಪಕ್ಕದ ಹೊಲಗಳಲ್ಲಿ ಬೆಳೆಗಳು ಕುಂಠಿತವಾಗುತ್ತಿರುವದರಿಂದ ರೈತರು ಹತಾಶರಾಗುತ್ತಿದ್ದಾರೆ. ಇರುವ ಅಲ್ಪಸ್ವಲ್ಪ ಬೆಳೆಯಿಂದ ಬರಬಹುದಾದ ಕಡಿಮೆ ಆದಾಯಕ್ಕೂ ಈ ಧೂಳಿನ ಮಜ್ಜನದಿಂದ ಕಲ್ಲು ಹಾಕಿದಂತಾಗುತ್ತದೆ ಎನ್ನುವದು ರೈತರ ಅಳಲು.

ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ನಿಟ್ಟಿನಲ್ಲಿ ಹಾಕಲಾಗಿರುವ ಖಡಿ ಮತ್ತಷ್ಟು ಗುಂಡಿಗಳನ್ನು ನಿರ್ಮಿಸುತ್ತಿದೆ. ಈ ರಸ್ತೆಯಲ್ಲಿ ನಿತ್ಯ ನೂರಾರು ವಾಹನಗಳು ಚಲಿಸುತ್ತಿರುವದರಿಂದ ರಸ್ತೆಯ ಧೂಳು ಹೊಲಗಳಲ್ಲಿರುವ ಬೆಳೆಗಳಿಗೆ ಮೆತ್ತಿಕೊಳ್ಳುತ್ತಿದೆ. ಬೆಳೆಗಳ ಬೆಳವಣಿಗೆಗೆ ಪೆಟ್ಟು ಬೀಳುತ್ತಿದ್ದು, ಸಂಬಂದಿಸಿದ ಇಲಾಖೆಯವರು ಕೂಡಲೇ ಕ್ರಮ ತೆಗೆದುಕೊಳ್ಳಿ ಎನ್ನುತ್ತಾರೆ ಗೊಜನೂರು ಗ್ರಾಮದ ಕರವೇ ಸಂಚಾಲಕರಾದ ಚೇತನ್ ಕಣವಿ, ಚಂದನಗೌಡ ದೊಡ್ಡಗೌಡ್ರ, ಸುರೇಶ ದನದಮನಿ, ಶೇಖಪ್ಪ ಮರೂಡಿ, ಭರಮಗೌಡ ಪಾಟೀಲ, ಮುದಕನಗೌಡ ಪಾಟೀಲ ಮುಂತಾದವರು.

## 'ಅಮೃತವಾಹಿನಿ' ಕಾರ್ಯಕ್ರಮ ನಾಳೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಶ್ರೀ ಜಗದ್ಗುರು ಪಂಚಾಚಾರ್ಯ ಅಮೃತವಾಹಿನಿ ಟ್ರಸ್ಟ್ ಗದಗ-ಬೆಟಗೇರಿ ವತಿಯಿಂದ ಅಮೃತವಾಹಿನಿ-119 ಮಾಸಿಕ ಕಾರ್ಯಕ್ರಮ ನವೆಂಬರ್ 1, ಬುಧವಾರ ಸಂಜೆ 6 ಗಂಟೆಗೆ ನಗರದ ಶ್ರೀ ಜಗದ್ಗುರು ಪಂಚಾಚಾರ್ಯ ಮಾಂಗಲ್ಯ ಮಂದಿರದಲ್ಲಿ ಜರುಗಲಿದೆ.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ರಾಜದೇಶಿ ಕೇಂದ್ರ ಶಿವಚಾರ್ಯ ಭಗವತ್ಪಾದರು ಬಾಳೆಹೊನ್ನೂರು ವಹಿಸುವರು.

ಶ್ರೀಷ.ಬ್ರ. ವಿಮಲರೇಣುಕ ಮುಕ್ತಿಮನಿ ಶಿವಾಚಾರ್ಯ ಸ್ವಾಮಿಗಳು ಮುಕ್ತಿಮಂದಿರ ಕ್ಷೇತ್ರ, ಶ್ರೀ ಷ.ಬ್ರ. ಡಾ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು ಜುಕ್ತಿ ಹಿರೇಮಠ ಸೂಡಿ, ಶ್ರೀ ಷ.ಬ್ರ.



ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಹಿರೇಮಠ ನರೇಗಲ್ಲ-ಸವದತ್ತಿ, ಶ್ರೀ ಷ.ಬ್ರ. ಅಭಿನವ ಪಂಚಾಕ್ಷರ ಶಿವಾಚಾರ್ಯ ಸ್ವಾಮಿಗಳು ಬ್ರಹನ್ಮಠ, ಅಡ್ನೂರು-ರಾಜೂರು-ಗದಗ 'ಮಾನ ಧರ್ಮ ಸಂದೇಶ ಸಾರಿದ ರಂಭಾಪುರಿ ವೀರಗಂಗಾಧರ ಜಗದ್ಗುರುಗಳು' ವಿಷಯದ ಕುರಿತು ಉಪದೇಶಾಮೃತ ನೀಡುವರು.

ರಾಜಗುರು ಗುರುಸ್ವಾಮಿ ಕಲಕೇರಿ, ಎಸ್.ಪಿ. ಸಂಶಿಮಠ ಈಶಣ್ಣ ಮುನವಳ್ಳಿ, ಪ್ರಕಾಶ ಉಗಲಾಟದ, ರಮೇಶ ಶಿಗ್ಲಿ, ವಿಜಯಕುಮಾರ ಹಿರೇಮಠ, ಮಹಾಂತೇಶ ವಸ್ತ್ರದ, ಚೇತನ್ ಅಂಗಡಿ, ಶಂಕರ ಗಡಾದ ಇವರಿಗೆ ಗುರುರಕ್ಷೆ ನೀಡಿ ಗೌರವಿಸಲಾಗುವುದು.

ಭಕ್ತಿ ಸಂಗೀತ ಮತ್ತು ರಾಜ್ಯೋತ್ಸವ ಸಂಭ್ರಮ ಗೀತೆಗಳನ್ನು ವೀರೇಶ ಕಿತ್ತೂರ ಗದಗನೆರವೇರಿಸುವರು. ಕಾರ್ಯಕ್ರಮದ ಭಕ್ತಿ ಸೇವೆಯನ್ನು ಬಸವರೆಡ್ಡಿ ಫ.ಬೆಳ್ಳಿಕೊಪ್ಪ ಹಾಗೂ ಪರಿವಾರ ಗದಗ ಇವರು ವಹಿಸಿಕೊಂಡಿರುವರು.

ಕಾರ್ಯಕ್ರಮಕ್ಕೆ ಸರ್ವರೂ ಆಗಮಿಸಬೇಕೆಂದು ಶ್ರೀ ಜಗದ್ಗುರು ಪಂಚಾಚಾರ್ಯ ಅಮೃತವಾಹಿನಿ ಟ್ರಸ್ಟ್ ಅಧ್ಯಕ್ಷ ಮಲ್ಲಿಕಾರ್ಜುನ ಶಿಗ್ಲಿ ಹಾಗೂ ಕಾರ್ಯದರ್ಶಿ ಶಿವಾನಂದಯ್ಯ ಹಿರೇಮಠ ಪತ್ರಿಕಾ ಪ್ರಕಟಣೆಯ ಮೂಲಕ ವಿನಂತಿಸಿದ್ದಾರೆ.

## ನವೆಂಬರ್ 3ರಿಂದ ಬಿಜೆಪಿಯಿಂದ ರಾಜ್ಯ ಪ್ರವಾಸ

**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಈ ಬಾರಿ ಮಳೆಯ ಅಭಾವದಿಂದಾಗಿ ರಾಜ್ಯದಲ್ಲಿ ಬರ (Drought) ಪರಿಸ್ಥಿತಿ ನಿರ್ಮಾಣವಾಗಿದೆ. ಇನ್ನು ರಾಜ್ಯ ಸರ್ಕಾರವೇ ಬರಪೀಡಿತ ತಾಲೂಕುಗಳನ್ನು ಪಟ್ಟಿದೆ.


ಈ ಮಧ್ಯೆ ಬಿಜೆಪಿ ಬರ ಅಧ್ಯಯನಕ್ಕಾಗಿ ನವೆಂಬರ್ 3ರಿಂದ ರಾಜ್ಯಾದ್ಯಂತ ಪ್ರವಾಸಕೈಗೊಳ್ಳಲಿದ್ದು ನವೆಂಬರ್ 10ರವರೆಗೆ ಪ್ರವಾಸ ಕೈಗೊಳ್ಳಲಿದೆ. ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಸೇರಿದಂತೆ ಬಿಜೆಪಿಯ ಪ್ರಮುಖ ನಾಯಕರ 17 ತಂಡಗಳು ಬರ ಪ್ರವಾಸ ನಡೆಸಲಿವೆ. ಬಿಎಸ್ ಯಡಿಯೂರಪ್ಪ ನೇತೃತ್ವದ ತಂಡ ತುಮಕೂರು ಮತ್ತು ಬೆಂಗಳೂರಿಗೆ ಭೇಟಿ ನೀಡಲಿದ್ದು, ಸಿ.ಟಿ.ರವಿ ನೇತೃತ್ವದ ಮತ್ತೊಂದು ತಂಡ ಕೋಲಾರ ಮತ್ತು ಚಿಕ್ಕಬಳ್ಳಾಪುರಕ್ಕೆ ಭೇಟಿ ನೀಡಲಿದೆ.


## ಪುಣ್ಯಸ್ಮರಣೋತ್ಸವ ಕಾರ್ಯಕ್ರಮ ಇಂದು

**■ವಿಜಯಸಾಕ್ಷಿ ಸುದ್ದಿ, ಗದಗ**

ನಗರದ ಸಂಭಾಪೂರ ರಸ್ತೆಯಲ್ಲಿರುವ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆಯಲ್ಲಿ ಮಂಗಳವಾರ ಬೆಳಿಗ್ಗೆ 11.30ಕ್ಕೆ ಶ್ರೀಮದ್ ರಂಭಾಪುರಿ ಲಿಂ. ಶ್ರೀ ಜಗದ್ಗುರು ವೀರಗಂಗಾಧರ ಶಿವಾಚಾರ್ಯ ಭಗವತ್ಪಾದಂಗಳವರ ಹಾಗೂ ಶ್ರೀಮತ್ ಕಾಶೀ ಲಿಂ. ಶ್ರೀ ಜಗದ್ಗುರು ವಿಶ್ವೇಶ್ವರ ಶಿವಾಚಾರ್ಯ ಭಗವತ್ಪಾದಂಗಳವರ ಪುಣ್ಯ ಸ್ಮರಣೋತ್ಸವ ಕಾರ್ಯಕ್ರಮ ನೆರವೇರಲಿದೆ.

ಬೆಳಿಗ್ಗೆ ಶ್ರೀಕಾಶಿ ವಿಶ್ವನಾಥನಿಗೆ ಪಾಠಶಾಲಾ ವಟುಗಳಿಂದ ಮಹಾ ರುದ್ರಾಭಿಷೇಕ ಹಾಗೂ ಉಭಯ ಜಗದ್ಗುರುಗಳವರ ಭಾವಚಿತ್ರಕ್ಕೆ ಮಹಾಪೂಜೆ, ಅಷ್ಟೋತ್ತರ ಶತನಾಮಾವಳಿ, ಮಹಾಮಂಗಳಾರತಿ ಪೂಜೆಗಳು ನೆರವೇರಲಿವೆ. ನಂತರ ಮಹಾ ಪ್ರಸಾದವಿರುತ್ತದೆ.





ಕಾರಣ ಶ್ರೀ ಜಗದ್ಗುರು ಪಂಚಾಚಾರ್ಯ ವೇದ ಸಂಸ್ಕೃತ ಪಾಠಶಾಲೆ, ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಸಂಘ, ಶ್ರೀ ಜಗದ್ಗುರು ವಿಶ್ವಾರಾಧ್ಯ ಜ್ಞಾನಾಮೃತ ಸಮಿತಿಯ ಎಲ್ಲ ಪದಾಧಿಕಾರಿಗಳು, ಸರ್ವ ಸದಸ್ಯರು ಹಾಗೂ ಪೀಠಾಭಿಮಾನಿಗಳು ಆಗಮಿಸಿ ಉಭಯ ಶ್ರೀ ಜಗದ್ಗುರುಗಳವರ ಆಶೀರ್ವಾದವನ್ನು ಪಡೆಯಬೇಕೆಂದು ಪಾಠಶಾಲಾ ಪ್ರಕಟಣೆಯಲ್ಲಿ ತಿಳಿಸಿದೆ.

### ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಚಿವ ಡಾ. ಎಚ್.ಕೆ ಪಾಟೀಲ

# ಐತಿಹಾಸಿಕ ಕಾರ್ಯಕ್ರಮದ ಗುರುತಿಗೆ 31 ಅಡಿ ಎತ್ತರದ ಸ್ತೂಪ ನಿರ್ಮಾಣ

**■ವಿಜಯಸಾಕ್ಷಿ ಸುದ್ದಿ, ಗದಗ**

ಐತಿಹಾಸಿಕ ಕಾರ್ಯಕ್ರಮ ನಡೆದಾಗ ವಿಶೇಷ ಗುರುತುಗಳನ್ನು ನಿರ್ಮಿಸಬೇಕು. ಆದ್ದರಿಂದ ಕರ್ನಾಟಕ ಸಂಭ್ರಮ-50ರ ನೆನಪನ್ನು ಅಚ್ಚಳಿಯದ ಹಾಗೆ ಉಳಿಸಲು ಜಿಲ್ಲಾಡಳಿತ ಆಸಕ್ತಿ ವಹಿಸಿ 31 ಅಡಿ ಎತ್ತರದ ಸ್ತೂಪ ನಿರ್ಮಿಸಲು ನಿರ್ಣಯ ಕೈಗೊಂಡಿದೆ ಎಂದು ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಚ್.ಕೆ ಪಾಟೀಲ ತಿಳಿಸಿದರು.

ನಗರದ ದಿ ಕಾಟನ್ ಸೇಲ್ ಸೊಸೈಟಿಯಲ್ಲಿ ಸೋಮವಾರ ಜರುಗಿದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಸಚಿವರು ಮಾತನಾಡಿ, ಸ್ತೂಪದಲ್ಲಿ 1973 ಹಾಗೂ 2023ರ ಐತಿಹಾಸಿಕ ಘಟನೆಗಳನ್ನು ಹಾಗೂ ಇತರೆ ಪ್ರಮುಖ ಮಾಹಿತಿಗಳು ದಾಖಲಾಗಿರುತ್ತದೆ. ನ.3 ರಂದು ಸಿಎಂ ಸಿದ್ದರಾಮಯ್ಯ ಅವರು ಪಂ.ಪುಟ್ಟರಾಜ ಗವಾಯಿಗಳ ವೃತ್ತದಲ್ಲಿನ ಈ ಸ್ತೂಪವನ್ನು ಅನಾವರಣ ಗೊಳಿಸಲಿದ್ದಾರೆ ಎಂದರು.

ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರು ನಾಮಕರಣ ಮಾಡಬೇಕು ಎಂಬ ದಿಸೆಯಲ್ಲಿ ಗದಗ ಭಾಗದವರು ವಿಶೇಷ ಪ್ರಯತ್ನ ಮಾಡಿದ್ದಾರೆ. ಕುಮಾರವ್ಯಾಸ ಅವರು ತಮ್ಮ ಕಾವ್ಯಕ್ಕೆ ಕರ್ನಾಟಕ ಭಾರತ ಕಥಾಮಂಜರಿ ಹೆಸರು ನೀಡಿದ್ದರೆ, ದುರ್ಗಸಿಂಹ ಹಾಗೂ ಅಲೂರು ವೆಂಕಟರಾಯರು ಕರ್ನಾಟಕ ಹೆಸರನ್ನು ಉಲ್ಲೇಖಿಸಿದ್ದಾರೆ. ಜಿಲ್ಲೆಯ ಅಂದಿನ ಪ್ರಮುಖರಾದ ಅಂದಾನಪ್ಪ ದೊಡ್ಡಮೇಟಿ, ಕೆ.ಎಚ್ ಪಾಟೀಲ, ಎಂ.ಎಂ ಕಣವಿ ಸೇರಿ ಹಲವರು ಶ್ರಮಿಸಿದ್ದಾರೆ.

ಅಲ್ಲದೇ, ಇಂದಿರಾ ಗಾಂಧಿ, ರಾಜೀವ ಗಾಂಧಿ ಹಾಗೂ ಸಾಯಿ ಬಾಬಾ ಅವರು ಸಾಕ್ಷಿಯಾಗಿರುವ ಸತ್ವಯುತ ದಿ. ಕಾಟನ್ ಸೇಲ್ ಸೊಸೈಟಿ ಆವರಣದ ನೆಲದಲ್ಲಿ ಐತಿಹಾಸಿಕ ಕಾರ್ಯಕ್ರಮ ನಡೆಯುತ್ತಿದ್ದು, ಸಾರ್ವಜನಿಕರ ಸಹಭಾಗಿತ್ವ ಪ್ರಾಮುಖ್ಯತೆ ಪಡೆದಿದೆ ಎಂದರು.



ರಾಜ್ಯದ ಒಂದು ಕೋಟಿಗೂ ಅಧಿಕ ಬಡ ಕುಟುಂಬಗಳನ್ನು ಬಡತನ ರೇಖೆಗಿಂತ ಮೇಲೆತ್ತುವ ಐದು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ ನಂತರ ಪ್ರಥಮವಾಗಿ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಗಳು ಜಿಲ್ಲೆಯಲ್ಲಿ ಜರುಗುತ್ತಿರುವ ಕನ್ನಡ ಜಾತ್ರೆಗೆ ಆಗಮಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಾಭಿಮಾನಿಗಳು, ಸಾಹಿತಿಗಳು, ಸಾರ್ವಜನಿಕರು ಭಾಗವಹಿಸುವದರ ಮೂಲಕ ಕನ್ನಡ ಜಾತ್ರೆಯನ್ನು ಯಶಸ್ವಿಗೊಳಸಿವಂತೆ ಸಚಿವ ಎಚ್.ಕೆ.ಪಾಟೀಲ ಮನವಿ ಮಾಡಿದರು.

ಕರ್ನಾಟಕ ಸಂಭ್ರಮ-50 ಕಾರ್ಯಕ್ರಮದ ನಂತರ 450 ಹಾಸಿಗೆಯುಳ್ಳ ಜಿಮ್ಸ್ ಕಟ್ಟಡ, ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಪರೇಷನ್ ಥಿಯೇಟರ್ ಉದ್ಘಾಟನೆ, ಆರ್‌ಡಿಪಿಆರ್ ವಿಶ್ವವಿದ್ಯಾಲಯಕ್ಕೆ ಭೇಟಿ, ನಂತರ ಸಾರ್ವಜನಿಕರ ಅಹವಾಲು ಸ್ವೀಕರಿಸಿ ಸಂಜೆ 4ಕ್ಕೆ ನಿರ್ಗಮಿಸವರು ಎಂದು ಸಚಿವ ಎಚ್.ಕೆ ಪಾಟೀಲ ಮಾಹಿತಿ ನೀಡಿದರು.

**ಸ್ಮಾರಕಗಳ ದತ್ತು ಸ್ವೀಕಾರ:** ನಾಡಿನ ಸಂಸ್ಕೃತಿ ಇತಿಹಾಸ ಸಾರುವ ಸ್ಮಾರಕಗಳ ರಕ್ಷಣೆಗೆ ನವೆಂಬರ್‌ನಲ್ಲಿ ಘೋಷಣೆ ಮಾಡಲಿದ್ದೇವೆ ಈಗಾಗಲೇ ಸ್ಮಾರಕ ದತ್ತು ಸ್ವೀಕಾರ ಕಾರ್ಯಕ್ರಮಕ್ಕೆ ಮಾನ್ಯ ಮುಖ್ಯಮಂತ್ರಿಗಳು ಚಾಲನೆ ನೀಡಿದ್ದು, ರಾಜ್ಯದಲ್ಲಿನ ಸ್ಮಾರಕಗಳ ದತ್ತು ಸ್ವೀಕಾರ ಕುರಿತು ಅನಿವಾಸಿ ಭಾರತಿಯರೊಂದಿಗೆ ಸಭೆ ಜರುಗಿಸಿ ದತ್ತು ಸ್ವೀಕಾರ ಕುರಿತು ಮನವಿ ಮಾಡಿದ್ದೇನೆ ಎಂದರು.

**ಗಡಿ ವಿಚಾರಣೆ ಮುಂದೂಡಿಕೆ:** ಸುಪ್ರೀಂ ಕೋರ್ಟನಲ್ಲಿ ನವೆಂಬರ್ 1ರಂದು ನಡೆಯಬೇಕಿದ್ದ ಕರ್ನಾಟಕ-ಮಹಾರಾಷ್ಟ್ರ ಗಡಿವಿವಾದ ಪ್ರಕರಣದ ವಿಚಾರಣೆಯನ್ನು 2024ರ ಜನವರಿ ತಿಂಗಳಿಗೆ ಮುಂದೂಡಲಾಗಿದೆ. ಗಡಿ ವಿಚಾರವಾಗಿ ಶಿವರಾಜ ಪಾಟೀಲ ಅವರ ನೇತೃತ್ವದ ಸಮಿತಿ ಇದ್ದು, ನಮ್ಮ ನಿಲುವುಗಳನ್ನು ತೆಗೆದುಕೊಳ್ಳಲು, ಸ್ಪಷ್ಟಪಡಿಸಲು ಸಮಯಾವಕಾಶ ದೊರೆತಂತಾಗಿದೆ. ಕನ್ನಡಪರ ಹೋರಾಟಗಾರರು, ವಿಶೇಷ ಆಸಕ್ತಿಯುವಳ್ಳವರು ಹಾಗೂ ಜ್ಞಾನವನ್ನು ಹೊಂದಿರುವವರ ಜೊತೆಗೆ ಸಮಾಲೋಚನೆ ಮಾಡುತ್ತೇವೆ ಎಂದು ಸಚಿವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಜಿ.ಎಸ್ ಪಾಟೀಲ, ಮಾಜಿ ಶಾಸಕ ಜಿ.ಎಸ್ ಗಡ್ಡದೇವರಮಠ, ಮಾಜಿ ಸಂಸದ ಆಯ್.ಜಿ ಸನದಿ ಸೇರಿದಂತೆ ಗಣ್ಯರಯ ಉಪಸ್ಥಿತರಿದ್ದರು.

### ಸ್ಮಾರಕ ಸಂರಕ್ಷಣೆಗಾಗಿ ಪ್ರವಾಸ

ನ.6ರಿಂದ ನಮ್ಮ ಸ್ಮಾರಕ ದರ್ಶನ ಹಾಗೂ ಅವುಗಳ ಸಂರಕ್ಷಣೆಗಾಗಿ ಬಸವಕಲ್ಯಾಣದಿಂದ ಪ್ರವಾಸ ಆರಂಭಿಸಲಿದ್ದೇನೆ. ಬಸವಕಲ್ಯಾಣ, ಬಾಲ್ಕಿ, ಬೀದರ, ಕಲಬುರಗಿಯ ನಾಗಾವಿಯಲ್ಲಿ 10ನೇ ಶತಮಾನದ ವಿಶ್ವವಿದ್ಯಾಲಯವಿದ್ದು, ಅಲ್ಲಿನ ಘಟಿಕೋತ್ಸವ ಸಭಾಂಗಣದ ದರ್ಶನ, ಸ್ವಚ್ಚತೆಯ ಜೊತೆಗೆ ದತ್ತು ಪಡೆಯುವ ಯೋಜನೆ ಆರಂಭವಾಗಲಿದೆ. ಅಲ್ಲಿಂದ ಮಳಖೇಡ, ಸೇಡಂ, ಯಾದಗಿರಿಯ ಸಿರಿವಾಳ ದೇವಾಲಯಗಳ ಸಮುಚ್ಚಾಲಯಕ್ಕೆ ಭೇಟಿ ನೀಡಿ, ಶಹಪೂರ ದ್ವಾರಬಾಗಿಲ ವೀಕ್ಷಣೆ, ಮಲಗಿದ ಬುದ್ದ ವೀಕ್ಷಣೆ, ನಂತರ ಯಾದಗಿರಿಯ ಕೋಟ ವೀಕ್ಷಣೆ ಮಾಡಲಿದ್ದೇನೆ. ಸರಕಾರದ ಜೊತೆಗೆ ಸಾರ್ವಜನಿಕರು ಸ್ಮಾರಕಗಳ ರಕ್ಷಣೆಗೆ ಕೈಜೋಡಿಸಬೇಕಿದೆ. ನಮ್ಮ ಸಂಸ್ಕೃತಿ, ಪರಂಪರೆಯನ್ನು ಉಳಿಸಿ ಬೆಳೆಸಬೇಕಿದೆ ಎಂದು ಹೇಳಿದರು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka